29—5—1936

IF NOT delivered please return to "KODAGU" OFFICE, MERCARA.

'KODAGU'
THE ONLY OLDEST WEEKLY OF COORG.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕಲಸಕ್ಕೆ "ಕೊಡಗು" ಪ್ರೆಸ್ಸ್.
ಪ ಡಿಳ್ಳಂ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೯—೫—೧೯೩೬ [ಸಂಚಿಕೆ ೫೧

Telephone; 3145

By Appointment
To H. E The Governor of Madras.

Telegrams:
'PRECIOUS.'

Brooch



Necklace.

Ring.

Ring.

V. SUBRAMANIA IYER,

Jeweller, & Diamond Merchant,

52—27 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

THE CANARA BANKING CORPORATION UDIPI, LTD.

Estd. 1906.

Head-office: UDIPI.

Branches:—(1) Udipi, (2) Coondapur, (3) Car—Street, Mangalore, (4) Shimoga, (5) Madras, (6) Bunder, Mangalore, (7) Mercara (8) Virarajendrapet

Bankers at—Important places in India,

Capital—Authorised, Issued and Subscribed Rs. 3,50,000.

Statement of steady progress in 30 years.

Year	Capital Paid up.	Reserves.	Deposits.	Govt Securities	Working Capital.
1918	18,500	[illegible]00	1,800	....	37,300
[illegible]				....	3,54,000
				82,600	9 63 800
				3,70,400	26,36 500
				51,559	31,62,454

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಲೆಕ್ಕ ನಿರ್ಣಯದ ವರ್ಷ 1936.

ಕಳೆದ ಸಾರಿ ಹಂಚಿದ ಬೋನಸ್ಸು ಅತೀ ಹೆಚ್ಚು.

ಒಟ್ಟು ಭಾಗಿದಾರಳ ರೂ. 70 ಲಕ್ಷವನ್ನು ಮೀರಿದೆ. ಕ್ಲೈಮ್ಸ್‌ವಾವತಿ ಮಾಡಿದ್ದು ರೂ. 37 ಲಕ್ಷವನ್ನು ಮೀರಿದೆ ಈಗ ಸೇರುವವರಿಗೂ ಲೆಕ್ಕ ನಿರ್ಣಯದ ಲಾಭ ಸಿಕ್ಕುತ್ತೆ. ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿವೆ. ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ಪಂಕವಾರುಪಕ್ಕೂ ಕಮಿಶನ್ ದೊರೆಯುವಂತಿದೆ. ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಜಿ. ಭಾರ್ಗವ, ಎಫ್. ಎಫ್. ಎಸ್. (ಲಂ
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂ
ಸೊಸೈಟಿ ಲಿಮಿಟೆಡ್, ಅಜಿ

ಎ. ಎಸ್
ಸುಪರಿಂಟೆಂಡೆಂಟ್, ಜನರಲ್
ಆಫೀ

ವಿವಿಧ ವಾರ್ತಾವಳಿ.

ತಾತಾ ಕಂಪೆನಿಯ ಲಾಭ.

ತಾತಾ ಕಬ್ಬಿಣ ಕಾರ್ಖಾನೆಯ ಲಾಭವು, ೧೯೩೬ ನೇ ಮಾರ್ಚ ತಾ. ೩೧ ಕ್ಕೆ ಅಂತ್ಯವಾಗುವ ಒಂದು ವರ್ಷದಲ್ಲಿ ೧,೫೮,೦೨,೪೫೫ ರೂಪಾಯಿ; ಡೈರೆಕ್ಟರರು ಸೇರಿದಾ ೧೪ ರ ಡಿವಿಡೆಂಡು ಹಂಚಿರುವರು.

—೦೦೦—

ಸಮೂಸಿನ ವಿಚಿತ್ರ ವಿಮಾನು.

ಸಮೂಸಿನಲ್ಲಿ ನೆಲದ ಮೇಲೆ ನಡೆಯಬಲ್ಲ ಒಂದು ತರದ ವಿಚಿತ್ರ ವಿಮಾನು ಇದೆ ಎಂಬುದನ್ನು ಕಂಡು ಹಿಡಿಯಲಾಗಿದೆ. ಈ ವಿಮಾನು ನೆಲದ ಮೇಲೆ ಅರ್ಧ ತಾಸಿನೊಳಗೆ 300 ಡಿಗಳಷ್ಟು ನಡೆಯಬಲ್ಲುದು.

—೦೦೦—

ಪ್ರಾಂತಿಕ ಚುನಾವಣೆಗಳು.

ಮದರಾಸು ಪ್ರಾಂತಿಕ ಎಸೆಂಬ್ಲಿ ಮತ್ತು ಕೌನ್ಸಿಲುಗಳಿಗೆ, ಚುನಾವಣೆಗಳ ಸ್ಪಷ್ಟ ತಾರೀಕು ಸರಕಾರದಿಂದ ಪ್ರಕಟಿಸಲ್ಪಡದಿದ್ದರೂ, ಚುನಾವಣೆಗಳು, ಬರುವ ಫೆಬ್ರವರಿ ತಿಂಗಳ ಎರಡನೆ ಅಥವಾ ಮೂರನೆ ವಾರದಲ್ಲಿ ನಡೆಸಲ್ಪಡಬಹುದಾಗಿ ಊಹಿಸಲಾಗಿದೆ

—೦೦೦—

೩೦ ಮಣದ ಗಣಪತಿಯ ಮೂರ್ತಿ.

ಬೇರಾವಳ ಬಳಿಯ ಭಾರಪಾರಾ ಎಂಬಲ್ಲಿ ಒಂದು ಹಳೆಯ ಬಾವಿಯನ್ನು ಸ್ವಚ್ಛಗೊಳಿಸುತ್ತಿರುವಾಗ ಕಲ್ಲಿನದೊಂದು ಪ್ರಚಂಡವಾದ ಗಣಪತಿ ಮೂರ್ತಿ ಸಿಕ್ಕಿದೆ. ಅದರ ತೂಕವು ೩೦ ಮಣ ಆಗುವುದು. ನಾಲ್ಕು ಕಡೆಗಳಲ್ಲಿ ಒಂದೇ ಕೈ ನೆಟ್ಟಗಿದ್ದು ಮೂರ್ತಿಯು ಅಖಂಡವಾದ ಕಲ್ಲಿನಲ್ಲಿ ಮಾಡಲ್ಪಟ್ಟಿದ್ದಿರುತ್ತದೆ.

—೦೦೦—

ಪ್ರೊ. ಸಾಸನೂರ ಇವರ ನಿಧನ.

ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರರಾಗಿದ್ದ ಪ್ರೊ. ಸಾಸನೂರ ಇವರು ತಾ. 4 ಕ್ಕೆ ಕ್ಷಯೆಯಿಂದ ಮರಣ ಹೊಂದಿದರು. ಇವರು ಇನ್ನೂ ಚಿಕ್ಕವರಾಗಿದ್ದು ತಾಯ್ನುಡಿಯ ಸೇವೆಯಲ್ಲಿ ಒಳ್ಳೇ ನಿರತರಾಗಿದ್ದರು. ಇವರ ಮರಣದಿಂದ ಕನ್ನಡಿಗರಿಗೆ ಹಾನಿಯುಂಟಾಗಿದೆಯೆಂದು ಹೇಳಬಹುದು.

—೦೦೦—

ನೊಟ್ಟೆಗಳನ್ನು ತಿನ್ನಬೇಕಾಗಿಲ್ಲ.

ನೊಟ್ಟೆಗಳನ್ನು ತಿನ್ನಲು ಅಸಹ್ಯಪಡುವವರು ಕಳಗಿನ ಮೂರು ವಿಧದ ಆಹಾರವನ್ನು ಸೇವಿಸಬಹುದು.

ಬೆಣ್ಣೆ, ಜೇನುತುಪ್ಪ, ಕಲ್ಲುಸಕ್ಕರೆ, ಸರಿಸಮಾನ ಪ್ರಮಾಣದಲ್ಲಿ ತೆಗೆದುಕೊಂಡು ಸಮವಾಗಿ ಕಲುಕಿಸಿ ಬೆಳಿಗ್ಗೆ ಎದ್ದೊಡನೆ ತಿನ್ನಬೇಕು. ಒಂದು ಚಾಮಚಜೆ ಸೇವನೆಯು ದೊಡ್ಡವರಿಗೆ ಸಾಕು. ಸಣ್ಣ ಮಕ್ಕಳಿಗೆ ಅದೇ ಪ್ರಕಾರ ಕಮ್ಮಿ ಮಾಡುತ್ತ ಹೋಗಬೇಕು.

—೦೦೦—

ಒಟ್ಟಾವಾ ಒಪ್ಪಂದದ ಮುಕ್ತಾಯ.

ಒಟ್ಟಾವಾ ಒಪ್ಪಂದವನ್ನು ಇದೇ ಮೇ ತಾ. ೧೩ನೇ ದಿನದಿಂದ ಮುಕ್ತಾಯಗೊಳಿಸಿದೆ ಎಂಬುದಾಗಿ ಟ್ರೇಡ್ ಬೋರ್ಡಿಗೆ ತಿಳಿಸಲಾಗಿದೆ. ಅಂದ ಮೇಲೆ, ಬರುವ ನವಂಬರು ತಾ ೧೩ರಿಂದ ಒಪ್ಪಂದವು ಜಾರಿಯಲ್ಲಿರುವುದಿಲ್ಲ. ಏಕೆಂದರೆ ಆರು ತಿಂಗಳ ಅವಧಿಯನ್ನು ಕೊಡಬೇಕೆಂಬ ನಿಬಂಧನೆಯೊಂದು ಇತ್ತು. ಇಂಡೊ—ಜಪಾನ್ ವ್ಯಾಪಾರ ಒಪ್ಪಂದದ ಕುರಿತು ಈಗ ಆಲೋಚನೆ ನಡೆಯುತ್ತಿವೆ.

—೦೦೦—

ನೀರಿನ ಕೊಳವೆಗಾಗಿ ಕಲಹ

ಶಾಹಿದ್ ಘಂಜಿನ ಹತ್ತಿರ ಸಿಖ್ಖ-ಮುಸ್ಲಿಮ ಗಲಭೆ.

ಶಾಹಿದ್ ಘಂಜಿನ ಕೇಂದ್ರದಲ್ಲಿರುವ ಒಂದು ನೀರಿನ [illegible] ಉಪಯೋಗದ ಕಾರಿತು, ಕೆಲ ಮಂದಿ ಸಿಖ್ಖರಿಗೂ [illegible] ಕಲಹವುಂಟಾಗಿ ಗಲಭೆಯುಂಟಾಯಿತ. [illegible] ತವಿಚಾರ ಸಂಬಂಧವಿರುವುದಿಲ್ಲ. ಅ[illegible] ಖ್ಖರಿಗೂ ಗಾಯಗಳಾಗಿವೆ. [illegible] ಹತ್ತರ ನಡೆದುದರಿಂದ, ಪೊಲೀ[illegible] ನಾರಿಯನ್ನು ನಡೆಯಿಸಿದರು. [illegible] ವಾಡಲಾಗಿದೆ.

—೦೦೦—

ಬಾಬು ಸುಭಾಷ ಬೋಸರ ಬಿಡುಗಡೆಯ ಪ್ರಯತ್ನ.

ಲಂಡನ್ನಿನಲ್ಲಿ ಬಾಬು ಸುಭಾಷ್ಚಂದ್ರ ಬೋಸರ ಬಿಡುಗಡೆಯ ಬಗ್ಗೆ ಪ್ರಯತ್ನವು ಜೋರಾಗಿ ನಡೆದಿದ್ದು, ಬಿಡುಗಡೆಯ ಬೇಡಿಕೆಯ ಅರ್ಜಿಯ ಮೇಲೆ 10 ಸಾವಿರಕ್ಕಿಂತ ಹೆಚ್ಚಿಗೆ ಸಹಿಗಳು ಮೂಡಿದ್ದುಟಿವೆ ಲೇಡ್ಬರ್ ಸಭೆಯಲ್ಲಿ ಲಾರ್ಡ್ ಥಿನ್‌ವುಡ್ ಇವರು ಸುಭಾಷರ ಬಿಡುಗಡೆಯ ಪ್ರಶ್ನೆಯನ್ನು ಕೇಳುವವರಿದ್ದಾರೆ.

ಬಾಬು ಸುಭಾಷ್ಚಂದ್ರ ಬೋಸರನ್ನು
ಅವರ ಅಂಣನ ಮನೆಯಲ್ಲಿಡುವರು.

ಬಾಬು ಸುಭಾಷ್ಚಂದ್ರ ಬೋಸರನ್ನು ಯರೋಡಾಜೈಲಿನಿಂದ ಕುರ್ಯಾಸಾಂಗಕ್ಕೆ ಸ್ಥಳಾಂತರಿಸಿದರೆಂದು ಪ್ರಕಟವೆಂಗಿದೆಯಷ್ಟೆ ! ಕುರ್ಯಾಸಾಂಗದಲ್ಲಿ ಅವರನ್ನು ಅವರ ಅಂಣನ ಮನೆಯಲ್ಲಿಯೇ ಕೈದಿನಲ್ಲಿಡುವರೆಂದು ಸುದ್ದಿ. ಬಾಬು ಸುಭಾಷ್ಚಂದ್ರ ಪ್ರಕೃತಿಯು ಬಹಳೇ ಕೃಶವಾಗಿರುವ್ದು ತೂಕವೂ ಕೂಡ ಕಡಿಮೆಯಾಗಿದೆಯಂತೆ.

—೦೦೦—

ಮುಂದಿನ ಕಾಂಗ್ರೆಸ್ಸ ಅಧಿವೇಶನ.

ಫೈಜಪುರ ಹಳ್ಳಿಯಲ್ಲಿ ಕೂಡುವುದು.

ಮಹಾರಾಷ್ಟ್ರದ ನಿರ್ಧಾರ

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ತಾ 22ರಿಂದ ಎಂಟು ತಾಸುಗಳ ವರೆಗೆ ಚರ್ಚೆಯಾದ ಬಳಿಕ ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಪೂರ್ವಖಾನದೇಶ ಜಿಲ್ಲೆಯೊಳಗಿನ ಫೈಜಪುರವೆಂಬಲ್ಲಿ ಕೂಡಿಸಬೇಕೆಂದು ನಿರ್ಣಯವಾಯಿತು. ಶ್ರೀ. ಶಂಕರರಾವ ದೇವ ಇವರ ಅಧ್ಯಕ್ಷತೆಯಲ್ಲಿ ತಾತ್ಪರ್ಯಿಕ ಸ್ವಾಗತಮಂಡಲವೂ ಸ್ಥಾಪಿಸಲ್ಪಟ್ಟಿದೆ. ಈ ಸ್ವಾಗತಮಂಡಲದ ಮುಂದಿನ ಸಭೆಯು ಆಗಸ್ಟು ತಿಂಗಳ ೨ನೆಯ ತಾರೀಖಿಗೆ ಕೂಡಿದಾಗ ಖಾಯಮ್ಮ ಸ್ವಾಗತಮಂಡಲವೂ ಅಧಿಕಾರಿಮಂಡಲವೂ ಆರಿಸಲ್ಪಡುವವು.

—೦೦೦—

ಕುವರ ಅಲಿಖಾನರ ವಿವಾಹ.

ಆಗಾಖಾನರ ಮಗ ಪ್ರಿನ್ಸ್ ಅಲಿಖಾನರು ಮಿಸೆಸ್ ಲೋಯೆಲ್ ಗಿನ್ನೆಸ್‌ಳನ್ನು ಪೇರಿಸ್ ನಗರದ ಮಸೀದಿಯಲ್ಲಿ ವಿವಾಹವಾದರು. ಫ್ರೆಂಚ್ ಕಾನೂನಿನ ಪ್ರಕಾರ ಟೌನ್‌ಹಾಲಿನಲ್ಲಿ ಪ್ರಥಮತಃ ವಿವಾಹಕ್ರಮವು ನಡೆಯಿತು. ಆ ಮೇಲೆ ಮಸೀದಿಯಲ್ಲಿ ಮುಸಲ್ಮಾನ ವಿಧಿರುತಿ ವಿವಾಹವಾಯಿತು.

ಮಿಸೆಸ್ ಗಿನ್ನೆಸಳು ಪಾರ್ಲಿಮೆಂಟ್ ಸದಸ್ಯರಾದ ಮಿ. ಗಿನ್ನೆಸರನ್ನು ವೆಂದಲು 1927ರಲ್ಲಿ ಮದುವೆಯಾಗಿದ್ದಳು. ಕ್ರಮೇಣ ಅಲಿಖಾನಂ ಪ್ರೇಮಕ್ಕೆ ಪಾತ್ರಳಾಗಿ ಅವರೊಡನೆ ವಿವಾಹವಿಚ್ಛೇದ ಕ್ರಿಯೆ ನಡೆದಿದ್ದಿತು. ಮಿಸೆಸ್ ಗಿನ್ನೆಸಳ ವಯಸ್ಸು 28 ವರ್ಷ, ಪ್ರಿನ್ಸ್ ಅಲಿಖಾನರು 25 ವರ್ಷ ವಯಸ್ಸಿನವರು.

—೦೦೦—

ಪುಸ್ತಕವನ್ನು ನೋಡದೆ ಓದುವುದು.

ಪುಸ್ತಕವನ್ನು ನೋಡದೆ ಓದುವುದ
ತರದ ಕನ್ನಡಕವನ್ನು ಕಂಡುಹಿಡಿದಿ
ಬೆಂಟ್ ಕನ್ನಡಕ'ವೆಂದು ಹೆಸರು.
ಅಭ್ಯಾಸ [illegible] ಪ್ರಯತ್ನ

ಪೋಲೀಸಿನವರ ಎದುರಿನಲ್ಲಿಯೇ ಕಳವು.

ಪೋಲೆಂಡಿನ ಕುಂಟೋ ಎಂಬಲ್ಲಿ ಕೆಲವು ಜನ ಕಳ್ಳರು ಒಂದು ಕಬ್ಬಿಣದ ಸಂಕವನ್ನು ಪೋಲೀಸರು ಇರುವಾಗಲೇ ಕದ್ದುಕೊಂಡು ಹೋದರು ಕಳ್ಳರು ಕೂಲಿಗಾರರ ವೇಷವನ್ನು ಧರಿಸಿಕೊಂಡು ಸಂಕವನ್ನು ಕದಲಿಸಲು ಪ್ರಾರಂಭಿಸಿದರು. ಆದುದರಿಂದ ಬೀದಿಯಲ್ಲಿ ಹೋಗುತ್ತಿದ್ದ ಜನರು ಮತ್ತು ಪೋಲೀಸರು ಕೂಡ ಅಧಿಕಾರಸ್ಥರ ಅಪ್ಪಣೆಯಿಂದಲೇ ಸಂಕವು ತೆಗೆಯಲ್ಪಡತ್ತಪೆಯೆಂದು ಗ್ರಹಿಸಿದರು. ಕಳ್ಳರಿಗೆ ಅಷ್ಟು ಧೈರ್ಯ ಬಂದೀತೆಂದು ಯಾರೂ ಯೋಚಿಸಲಿಲ್ಲ. ತೆಗೆದ ಸಂಕವನ್ನು ಪುನಃ ಇಡಲಿಲ್ಲವಾದುದರಿಂದ ಸಂಶಯಗ್ರಸ್ತರಾಗಿ ಪೋಲೀಸರು ಸಂಕದ ಅಧಿಕಾರಿಗಳನ್ನು ವಿಚಾರಿಸಿದಾಗ ಸಂಕವನ್ನು ತೆಗೆಯಲು ಹೇಳಲಿಲ್ಲವಾಗಿ ತಿಳಿದುಬಂತು. ಕಬ್ಬಿಣದ ಬೆಲೆಗಾಗಿ ಸಂಕವನ್ನು ಕದ್ದರೆಂದು ಊಹನೆ.

—೦೦೦—

ಭವಾಲ್ ಸನ್ಯಾಸಿ ಮೊಕದ್ದಮ್ಮೆ !

ಡಾಕಾ ಸ್ಪೆಷ್ಯಲ್ ಜಡ್ಜರ ಕೋರ್ಟಿನಲ್ಲಿ ಕಳೆದ ಮೂರು ವರ್ಷಗಳಿಂದ ನಡೆಯುತ್ತಿದ್ದ ಭವಾಲ್ ಸನ್ಯಾಸಿ ಮೊಕದ್ದಮೆಯು ಮುಗಿಯಿತು. ಪ್ರಸಂಚದಲ್ಲಿ, ಅತೀ ದೀರ್ಘಕಾಲ ವಿಚಾರಣೆ ನಡೆದ ಮೊಕದ್ದಮೆಗಳಲ್ಲಿ ಇದು ಒಂದು. ವಾದಿಗಳ ಪರವಾಗಿ ಒಂದು ಸಾವಿರ ಮತ್ತು ಪ್ರತಿವಾದಿಗಳ ಪರವಾಗಿ. 500 ಹೀಗೆ ಸಾಕ್ಷಿಗಳ ವಿಚಾರಣೆಯು ಆಯಿತು.

ವಾದಿಯ ಹೆಸರು ಭವಾಲ್ ಸನ್ಯಾಸಿ ಎಂದು ತಾನು ಭವಾಲ್ ಪ್ರದೇಶದ ದ್ವಿತೀಯ ಕುವರನೆಂದು ಅತನ ವಾದ. "೧೯೦೯ ನಾನು ಡಾರ್ಜಿಲಿಂಗಿಗೆ ಹವಾ ಬದಲಾವಣೆಗೋಸುಗ ಹೋಗಿದ್ದೆ. ಅಲ್ಲಿ ನನ್ನ ವೈರಿಗಳು ಒಳಸಂಚು ನಡಿಸಿ ಪಾಷಾಣಕೊಟ್ಟರು. ನಾನು ಸತ್ತೆನೆಂದು ಊಹಿಸಿ ರಾತ್ರಿ ಕಾಲವಲ್ಲಿ ನನ್ನನ್ನು ಸ್ಮಶಾನಕ್ಕೆ ಒಯ್ದರು. ಅದೇ ಸಮಯದಲ್ಲಿ ಕರ್ಣಧಾರೆಯಾಗಿ ಮಳೆ ಸುರಿದುದರಿಂದ ನನ್ನ ದೇಹವನ್ನು ಅಲ್ಲೆ ತೊರೆದು ಹೋದರು ಕೆಲವು ನಾಗಸನ್ಯಾಸಿಗಳು ದೈವವಶಾತ್ ಅತ್ತ ಕಡೆ ಬಂದುದರಿಂದ ಅವರು ಮಾಡಿದ ಚಿಕಿತ್ಸೋಪಚಾರಗಳಿಂದ ನಾನು ಬದುಕಿಕೊಂಡೆ. ೧೯೨೨ ರ ತನಕ ಅವರ ಶಿಷ್ಯನಾಗಿದ್ದುಕೊಂಡು ಅನಂತರ ಭವಾಲಿಗೆ ಬಂದೆ. ಭವಾಲ್ ಅಭಿಗಳಿಗೆ ನಾನೇ ಭಾಧ್ಯಸ್ಥನು." ಹೀಗೆ ವಾದಿಯ ಹೇಳಿಕೆ, ಇವನಾವನೋ ಮೋಸಗಾರನೆಂದು ಪ್ರತಿವಾದಿಗಳು ಎನ್ನುತ್ತಿದ್ದಾರೆ.

—೦೦೦—

ನಿರ್ಮಲನಾದ ಆಹಾರವು ಸೌಖ್ಯದ ಹಾದಿ.

ರಷ್ಯಾನ್ ಸರಕಾರದ ದಿವ್ಯ ಏರ್ಪಾಡು.

ದೇಹಾರೋಗ್ಯವನ್ನು ಅನೇಕ ವಿಧದಿಂದ ಕೆಡಿಸಿಕೊಳ್ಳಬಹುದು, ಅವುಗಳಲ್ಲಿ ಕೆಟ್ಟ ಆಹಾರಗಳ ಭುಂಜನೆಯೊಂದು. ಇಂತಹ ಆಹಾರದಿಂದಲೆ ಜಗತ್ತಿನ ಹಲವೆಡೆಗಳಲ್ಲಿ ರೋಗಗಳು ಆಗಾಗ ತಲೆದೋರಿ ಜನತೆಯಲ್ಲಿ ಶಿಥಿಲತೆಯನ್ನೂ ನಿರ್ಬಲತೆಯನ್ನೂ ಹುಟ್ಟಿಸಿವೆ. ಬಡತನಕ್ಕೂ ಇದೇ ಕಾರಣವೆಂದೂ ಹೇಳಬಹುದು. ಆಹಾರದ ವಿಷಯ ಒಳ್ಳೇ ಜಾಗ್ರತೆ ತೆಗೆದುಕೊಂಡವರು ರಷ್ಯಾ ದೇಶದವರು. ಅದಕ್ಕಾಗಿ ಎಷ್ಟಾ ಗವರ್ನಮೆಂಟಿನವರೂ ಅವರನ್ನು ಕೊಂಡಾಡಿರುವರು.

ರಷ್ಯಾದೇಶದಲ್ಲಿ ಸರ್ವಸಾಧಾರಣವಾಗಿ ಎಲ್ಲರೂ ಈಗ ಹೊಟೇಲುಗಳಲ್ಲೆ ಊಟವನ್ನು ತಿನ್ನುತ್ತಿರುವರು. ಕಾರಣ ಈ ಹೊಟೇಲುಗಳಲ್ಲಿ ಎಲ್ಲರ ಜೀರ್ಣಕ್ಕೂ ಸರಿಯಾಗುವ ಆಹಾರಗಳನ್ನೇ ಸಿದ್ಧಪಡಿಸುವ ಕ್ರಮವಿಟ್ಟಿರುವರು. ಮನುಷ್ಯನ ದೇಹ ಪುಷ್ಟತೆಗೆ ಬೇಕಾದ ಆಹಾರ, ಆರೋಗ್ಯವಿಕಾಸವಾಗ ತೆಗೆದುಕೊಳ್ಳಬೇಕಾದ ಆಹಾರ, ಕೂಲಿಕಾರರು ತೆಗೆದುಕೊಳ್ಳುವ ಆಹಾರ ಹೀಗೆ ತರತರದ ಆಹಾರಗಳು ಒಂದೇ ಬೆಲೆಗೆ ದೊರಲ್ಪಡುವ ಪ್ರತಿ ಒಂದು ಹೊಟೇಲಿನಲ್ಲೂ ಒಬ್ಬ ಮೆಡಿಸಿರು

ರಾಷ್ಟ್ರಸಭಾಪತಿಗಳು ಬೊಂಬಾಯಿಯಲ್ಲಿ.

ಸಮಾಜವಾದ ತತ್ವ ಪ್ರಸಾರಣೆ.

ಎಲ್ಲಿಲ್ಲಾ ಅಪೂರ್ವ ಸತ್ಕಾರ.

ಪಂಡಿತ ಜವಾಹರಲಾಲರು ಕಳೆದ ವಾರ ಬೊಂಬೈಯಲ್ಲಿದ್ದರು. ಆ ಸಮಯದಲ್ಲಿ ಅವರೊಂದುಗಳಿಗೆಯೂ ವಿಶ್ರಮಿಸಿಕೊಂಡಿಲ್ಲ. ಪತ್ರಿಕಾಕಾಲ ಹೊತ್ತಿಗೆ ಎದ್ದು ರಾತ್ರಿಯ ವೇಳೆಯ ವರೆಗೂ ಏಕಸಮವಾಗಿ ದುಡಿದರು. ಅವರ ಒಂದು ವಾರ ಕಾಲದ ಈ ಓಡಾಟಗಳನ್ನು ಸ್ಥೂಲವಾಗಿ ನೋಡಿದರೆ, ಕೇವಲ ಸಮತಾವಾದ ತತ್ವಪ್ರಚಾರವೇ ಅವುಗಳ ಅಧ್ಯಂತ ಧ್ಯೇಯವೆಂದು ಕಾಣುತ್ತದೆ. ಜತೆಗೆ ಸಾಮ್ರಾಜ್ಯವಿರೋಧ ಪ್ರಕೃತಿಗಳ ಏಕೀಕರಣವೂ ಒಂದಂಗವೆಂದು ತೋರಿಬರುತ್ತದೆ. ಅರ್ಥಾತ್ ಕಾಂಗೆಸ್ ಪ್ರಬಲ್ಯದ ಪುನರುದ್ಧಾರ, ಅದರ ಪ್ರತಿಷ್ಠಾಪನೆ.



ನಾಗರೀಕ ಸ್ವಾತಂತ್ರ್ಯ ಸಂಘ.

ಪಂಡಿತರು ನೂಡಿರುವ ಪ್ರಥಮ ಸಾಮ್ರಾಜ್ಯವಿರೋಧ ಪ್ರಕೃತಿಗಳ ಏಕೀಕರಣ ಕಾರ್ಯವೆಂದರೆ ನಾಗರೀಕ ಸ್ವಾತಂತ್ರ್ಯ ಸಂಘದ ಸ್ಥಾಪನೆ. ಅದರ ಉದ್ದಿಶ್ಯ ನಾನಾ ರಾಜಕೀಯ ನಾಯಕರ ಅಭಿಪ್ರಾಯವನ್ನು ಕುರಿತು ವ್ಯಕ್ತಿಸಿದರು. ಉತ್ಕರ್ಷಕೊಟ್ಟಿದವರ ಪೈಕಿ, ಲಿಬರಲ್ ನಾಯಕರಾದ ಸರ್ ಸಪ್ರುರವರು ಸ್ಪಷ್ಟವಾಗಿಯೂ, ಶ್ರೀ ಚಿಂತಾಮಣಿಯವರು ಪರ್ಯಾಯವಾಗಿಯೂ, "ಭಾರತೀಯರ ಪೂರ್ಣ ಸ್ವಾತಂತ್ರ್ಯ ಭಂಗಕ್ಕೆ ಕಾಂಗ್ರೆಸಿನವರೇ ಕಾರಣ. ಸತ್ಯಾಗ್ರಹ ಶಾಸನೋಲ್ಲಂಘನ ಇತ್ಯಾದಿ ಪ್ರಭುತ್ವದವರ ದರ್ಪೋದ್ರೇಕವಾದ ಕಾರ್ಯಕ್ರಮಗಳನ್ನು ಕಾಂಗ್ರೆಸು ಹೂಡುತ್ತಿರುವುದರಿಂದ ನಾಶವಾಗಬಹುದಾದ ನಾಗರೀಕ ಸ್ವಾತಂತ್ರ್ಯಗಳ ರಕ್ಷಣೆ ಮಾಡುವ ಕಾರ್ಯಕ್ಕೆ ನಾವು ಕಾಂಗ್ರೆಸೊಡನೆ ಸಹಕರಿಸಲಾಗುವುದಿಲ್ಲ. ಸಹಕರಿಸದೆ, ನಾಗರೀಕ ಸ್ವಾತಂತ್ರ್ಯ ಸಂಘವು ಒಂದು ಪಕ್ಷದ ಕೈಗೊಂಬೆಯಾಗುತ್ತದೆ" ಎಂದು ತಿಳಿಸಿಬಿಟ್ಟಿದ್ದಾರೆ. ಪಂಡಿತ ಮೋಳವೀಯರು ತಮ್ಮ ಕೈಲಾದಷ್ಟು 'ಸಹಾಯ ಮಾಡಲು ಸರ್ವದಾಸಿದ್ಧರೆಂದು ಭರವಸೆ ಕೊಟ್ಟಿದ್ದಾರೆ.

ಪಂಡಿತ ಜವಹರಲಾಲರು ಮುಂಬೈಯಲ್ಲಿಯೂ ಈ ಪ್ರಯತ್ನವನ್ನು ಮಾಡಿದರು. ವಕೀಲರು, ನಾನಾ ಪಕ್ಷ ನಾಯಕರೊಂದಿಗೆ ಚರ್ಚೆ ನಡೆಸಿದರು. ಇದುವರೆಗೆ ಶುಭಸೂಚನೆಗಳೇ ಎದ್ದು ಕಾಣುತ್ತಿವೆ. ಪ್ರಮುಖಾನಾ ಪ್ರಾಂತೀಯರು ಈ ವಿಚಾರದಲ್ಲಿ ಒಹಳ ಆಸಕ್ತಿಯನ್ನು ತೋರಿಸುತ್ತಿದ್ದಾರೆ.

ಸಂಸ್ಥಾನ ಪ್ರಜೆಗಳ ವಿಶಯ ಕಾಂಗ್ರೆಸ್ಸಿನ ಧೋರಣೆ

ಸಂಸ್ಥಾನ ಪ್ರಜೆಗಳ ಸಮ್ಮೇಳನದ ಆಶ್ರಯದಲ್ಲಿ ಪಂಡಿತ ಜವಹರಲಾಲ ನೆಹರುರವರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣವೂಡಿದರು. ಬೊಂಬಾಯಿಯ ಮೇಯರಾದ ಮೆ. ಜಮ್ನಾದಾಸ್ ಮೆಹತಾರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಪಂಡಿತ ಜವಹರಲಾಲರು ಮಾತನಾಡುತ್ತಾ, ಹಿಂದೂ ದೇಶವನ್ನು ಬ್ರಿಟಿಷ್ ಇಂಡಿಯಾ ಮತ್ತು ಇಂಡಿಯನ್ ಇಂಡಿಯಾ (ದೇಶೀಯ ಸಂಸ್ಥಾನಗಳು) ಎಂಬುದಾಗಿ ಪ್ರಾಕೃತಿಕವಾಗಿ ವಿಭಾಗಿಸುವುದಕ್ಕಾಗುವುದಿಲ್ಲ. ಇದು ಬರೇ ಕೃತಕವಾದ ವಿಭಾಗ. ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಹೋಡದಾಡುತ್ತಿರುವುದು ಇಡೀ ದೇಶಕ್ಕಾಗಿಯೇ, ಅಂದ ಮೇಲೆ ಸಂಸ್ಥಾನಗಳಲ್ಲಿ ನಿರಂಕುಶಪ್ರಭುತ್ವವನ್ನು ಅವೆನ್ನು ಕಾಂಗ್ರೆಸು ಸಹಿಸಲಾರದು. ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವವು ಒರಬೇಕಾದರೆ, ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಸಂಸ್ಥಾನದ ಪ್ರಜೆಗಳೇ ಅದಕ್ಕೆ ಜವಾಬ್ದಾರಿ. ಆದರೆ, ಸಂಸ್ಥಾನ ಪ್ರಜೆಗಳ ಜವಾಬ್ದಾರೀ ಎಂದು ಹೇಳಿಬಿಟ್ಟು ಕಾಂಗ್ರೆಸು ಸುಮ್ಮನಿರುವುದಕ್ಕೆ ಆಗುವುದಿಲ್ಲ. ಕಾಂಗ್ರೆಸು ಸಂಸ್ಥಾನಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಹೇಳುವ ಹಾಗಿಲ್ಲ. ಬ್ರಿಟಿಷ್ ಇಂಡಿಯಾದ ಒಂದು ಪ್ರಾಂತ್ಯದಲ್ಲಿ ಯಾವುದಾದರೂ [illegible] ಪಡೆದರೆ, ಆಗ್ಗೆ ಆ ಪ್ರಾಂತ್ಯದ ಜನರೇ ಅದನ್ನು [illegible] ದೆಯೆಂದರು. ಅದನ್ನು ರಕ್ಷಿಸುವುದೇ ಸಮ್ಮ ಕೆಲಸ ಅದನ್ನು ಮೇಲೆ ಹಾರಿಸುತ್ತಲೇ ಇರಬೇಕೆಂದರು.

ಮಹಮ್ಮದಿಯರಿಗೆ ಬುದ್ಧಿವಾದ.

ಬೊಂಬಾಯಿಯಲ್ಲಿ ನಡೆದ ಮುಸ್ಲಿಮರ ಸಭೆಯಲ್ಲಿ ಶ್ರೀ. ಜವಾಹರಲಾಲರು ಭಾಷಣ ಮಾಡುತ್ತಾ, ಹಿಂದೂಗಳೂ ಮುಸ್ಲಿಮರೂ ಅನಾವಶ್ಯಕವಾದ ಕಲಹಗಳನ್ನು ಬಿಟ್ಟುಬಿಡಬೇಕೆಂದೂ, ರಾಜಕೀಯ ಸ್ವಾತಂತ್ರ್ಯ ಸಾಧನೆಗಾಗಿ ಯಾತ್ನಿಸಬೇಕೆಂದೂ ಬುದ್ಧಿವಾದವನ್ನು ಹೇಳಿದರು.

ಮಜೂರರ ಹಿತಸಾಧನೆ.

ಸಾಮ್ರಾಜ್ಯವಿರೋಧ ಪ್ರಕೃತಿಗಳನ್ನು ಒಟ್ಟುಗೂಡಿಸುವ ಕಾರ್ಯದಲ್ಲಿ ಅವರು ಬೊಂಬಾಯಿಲ್ಲಿ ನಡೆಸಿರುವ ಎರಡನೆಯ ಕೆಲಸವೆಂದರೆ ಕೂಲಿಕಾರರಿಗೆ ಸೋಷಲಿಸ್ಟ್ ತತ್ವೋಪದೇಶ ಮಾಡಿ, ಸ್ವಾತಂತ್ರ್ಯ ಚಳುವಳಿಗೆ ಅವರು ಸೇರಬೇಕೆಂದೂ, ಸ್ವಾತಂತ್ರ್ಯಕ್ಕಾಗಿ ಪಣತೊಟ್ಟು ನಿಂತಿರುವ ಕಾಂಗ್ರೆಸನ್ನು ಅವರು ಸೇರಬೇಕೆಂದೂ ನಡೆಸುತ್ತಿರುವ ಏಕೀಕರಣ ಕಾರ್ಯ.

ಮೊದಲು ಎಲ್ಲ ಪಕ್ಷಗಳ ಕೂಲಿಕಾರನಾಯಕರನ್ನೂ ಭೇಟಿಮಾಡಿ, ಕಾಂಗ್ರೆಸಿಗೂ ಕೂಲಿಕಾರರ ಪಕ್ಷಗಳಿಗೂ ಐಕ್ಯತೆಯನ್ನುಂಟುಮಾಡಿದರೆ ಆ ಸಂಘಟನೆಯು ಎಷ್ಟು ಮಹತ್ತರವಾದ ಸಾಮ್ರಾಜ್ಯಧ್ವಂಸಕ ಶಕ್ತಿಯೂಗುತ್ತದೆ ಎನ್ನುವುದನ್ನೂ ಈ ಕೆಲಸಕ್ಕೂ ಸೋಷಲಿಸ್ಟ್ ತತ್ವಕ್ಕೂ ಇರುವ ನಿಕಟ ಬಾಂಧವ್ಯವನ್ನೂ ಜಜಿಸಿದರು.

ಅನಂತರ, ಕೂಲಿಕಾರರ ಮಹಾ ಸಮ್ಮೇಳನದಲ್ಲಿ ಭಾಗವಹಿಸಿದರು. ಅದೊಂದು ಚಿರಸ್ಮರಣೀಯವಾದ ಸಂಗತಿ. ಕಾಂಗ್ರೆಸ್ ಅಧ್ಯಕ್ಷರು ಸಮತಾವಾದ ತತ್ವಕ್ಕೆ ತಲೆಬಾಗಿ ಕೂಲಿಕಾರರನ್ನು ಪ್ರೇಮಾಲಿಂಗನಕ್ಕೆ ಕರೆದುದು ಇದೇ ಪ್ರಥಮ. ಆ ಸಮ್ಮೇಳನದಲ್ಲಿ ಪಂಡಿತರ ಸಾನ್ನಿಧ್ಯವು ಒಂದು ಬಗೆಯ ವಿದ್ಯುತ್ಸಂಚಯವನ್ನು ಹರಿಸಿತು. ಎಲ್ಲರೂ ಚೇತನಪೂರ್ಣರಾಗಿ ಎದ್ದು ನಿಂತರು.

ನೆರೆದ ಕೂಲಿಕಾರರಿಗೆ ಭಾಷಣ ಮಾಡುತ್ತಾ ಪಂಡಿತ ಜವಹರಲಾಲರು—

"ಕೂಲಿಕಾರರಿಗೆ ಇಬ್ಬಗೆಯ ಪಾರಂತಂತ್ರ್ಯ. ಅವರಷ್ಟು ಕಷ್ಟ ಕಾರ್ಪಣ್ಯಗಳಿಗೆ ಒಪಶಃ ರೈತನನ್ನು ಬಿಟ್ಟರೆ ಮತ್ತಾರೂ ಅಷ್ಟು ಗುರಿಯಾಗಿಲ್ಲ. ನಮ್ಮದೇಶಕ್ಕೆ ಪಾರಂತಾಂತ್ರ್ಯ. ಈ ದೇಶದ ಪಾರಂತಂತ್ರ್ಯದ ಹೊರೆಯು ಜತೆಗೆ ಅವರಿಗೆ ಬಂಡವಾಳಗಾರರ ದಬ್ಬಾಳಿಕೆಯು ಬೇರೆ. ಇಷ್ಟನ್ನು ಹೊರುತ್ತ ಅವರು ಭೂಗತರಾಗುತ್ತಿದ್ದಾರೆ.

[illegible] ಶ ಸ್ವಾತಂತ್ರ್ಯಕ್ಕೆ ಹೊಡೆದಾಡುತ್ತಿದೆ. ದವೂತ್ಕರ್ಷಕ್ಕೆ ಭಾರತೀಯರ ಸಮಸ್ತ [illegible] ಲ್ಲ. ಎಂದಿನ ವರೆಗೆ ಒಬ್ಬರು

ದುಃಖಗಳಲ್ಲಿ ನರಳುತ್ತಿರುವ ಕೂಲಿಕಾರರಿಗೆ ಇದಕ್ಕಿಂತಲೂ ಅಮೃತೆವಾನವುಂಟೆ. ?

ಭಂಡವಾಳಗಾರರ ವಿರೋಧ ಮತ್ತು ಜವಾಹರರ ಉತ್ತರ

ಬಂಡವಾಳಗಾರ ಸಮಾಜವನ್ನು ಮೂಲೋತ್ಪಾಟನೆಮಾಡುವ ಪಂಡಿತರು ಹಿಂದಿನಿಂದಲೂ ನಡೆಸುತ್ತಿರುವ ಚಳುವಳಿಯನ್ನು ನೋಡಿ ಬೊಂಬಾಯಿನ ವರ್ತಕ ಕುಬೇರರಿಗೆ ಮನಃಕ್ಷೋಭೆ ಪ್ರಾರಂಭವಾಯಿತು. ಅವರ ಮುಖಂಡರಾದ ಶ್ರೀ ಷಾಫರು, "ಪಂಡಿತರನ್ನು ಹಾಗೆಯೆ ಬಿಟ್ಟರೆ ಯವ ಹಾವಳಿಯನ್ನು ಮಾಡುತ್ತಾರೆ. ದೇಶವನ್ನೆ ಕಲಹಕೂಪಕ್ಕೆ ತಳ್ಳುತ್ತಾರೆ. ಕಾಂಗ್ರೆಸನ್ನು ಎದುರಿಸಿ ಪಂಡಿತರನ್ನು ಗದರಿಸಿ" ಇತ್ಯಾದಿಯಾಗಿ ಕೂಗಾಡುತ್ತ "ಪಂಡಿತರು ಬೊಂಬಾಯಿಗೆ ಬರುತ್ತಾರೆ. ಆಗ ಮುಖತಃ ಅವರ ಈ ವಿಧ್ವಂಸಕ ಕಾರ್ಯವನ್ನು ಅವರಿಗೆ ಮುಂದಿಟ್ಟಾಗುವಂತೆ ತಿಳಿಸೋಣ" ಎಂದು ಹೇಳಿದ್ದರು.

ಪಂಡಿತರು ಈ ಗೊಡ್ಡು ಬೆದರಿಕೆಗಳಿಗೆಲ್ಲ ಎಧೆಗುಂದುತ್ತಾರೆಯೆ ? "ಎಲ್ಲೂ ಕೂಗಾಡಿದುದಂದೇನು ಸುಖ. ಶ್ರೀ ಷಾಫರು ನಾಲ್ಕು ಜನರೆದುರಿಗೆ ನಿಂತು ನಾನು ಬೋಧಿಸುತ್ತಿರುವ ತತ್ವವು ತಪ್ಪೆಂದು ತಿಳಿಸಲಿ, ನೋಡೋಣ. ಒಂದು ಕಡೆ ಕಾಂಗ್ರೆಸನ್ನೂ, ಮತ್ತೊಂದು ಕಡೆ ಸರಕಾರವನ್ನೂ ತಲೆ ಸವರುವ ವಿದ್ಯೆಗಳೆ ಕೆ!" ಎಂದು ಪಂಡಿತರು ಉತ್ತರವಿತ್ತರು. ಮೊನ್ನೆ ಪಂಡಿತರನ್ನು ಆ ವರ್ತಕ ಕುಬೇರರು ಆಹ್ವಾನಿಸಿ "ಏನು ವಿಷಯ" ವೆಂದು ಪ್ರಶ್ನಿಸಿದರು.

ಪಂಡಿತರಿಗೆ ಎರಡು ಆಡುವುದಕ್ಕೆ ಬರುವುದಿಲ್ಲ. ನೇರವಾಗಿ ವ್ಯಾಖ್ಯಾರಂಭ ಮಾಡಿದರು.

"ಸಮತಾವಾದವು ನನ್ನ ಅಥವಾ ಮತ್ತೊಬ್ಬರ ಕೃತಕ ಸೃಷ್ಟಿಯಲ್ಲ. ಅಥವಾ ಅಸ್ವಾಭಾವಿಕವಾದ ವ್ಯಾಪಾರವೂ ಅದಲ್ಲ. ಮಾನವಕುಲ ದ್ವೇಷದಿಂದ ಪ್ರೇರಿತವಾದ ದುಗ್ದೆಯ ಕಾರ್ಯವೂ ಅದಲ್ಲ. ಅದು ಕಾಲಧರ್ಮ. ಚರಿತ್ರೆಯು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ.

"ಸ್ವಾತಂತ್ರ್ಯ ಧ್ಯೇಯವು ಮಾನವ ಕುಲವನ್ನು ಆವರಿಸಿದೆ. ಸ್ವಾತಂತ್ರ್ಯವೆಂದರೆ ಕೆಲವರಿಗೆ ಅಲ್ಲ. ಸಮಸ್ತರಿಗೂ. ಬಂಡವಾಳಗಾರರಿದ್ದರೆ, ಕೂಲಿಕಾರರಿಗೆ ಸ್ವಾತಂತ್ರ್ಯವೆಲ್ಲಿ ? ಸೌಖ್ಯವೆಲ್ಲಿ ? ಅವರ ಶ್ರಮಕ್ಕೆ ತಕ್ಕ ಫಲವೆಲ್ಲಿ ? ಆದುದರಿಂದ ಸರ್ವರಿಗೂ ಸ್ವಾತಂತ್ರ್ಯವೇಕು ಈ ಸ್ವಾತಂತ್ರ್ಯೋಚ್ಚೈಯು ಸರ್ವ ಅಂತರಗಳನ್ನೂ ಗುರುತಿಸಹಾಕುತ್ತದೆ. ಇದು ಸ್ವಾಭಾವಿಕವಲ್ಲವೆ ? ಇದೇ ಸಮತಾವಾದ. ಯಾರು ಇಷ್ಟಪಟ್ಟರೂ ಪಡದಿದ್ದರೂ ಇದು ಬಂದೇ ಬರುತ್ತದೆ ಯಾರು ಬೋಧಿಸಿದರೂ, ಬೋಧಿಸದಿದ್ದರೂ ಇದು ದುರ್ದುಮ್ಯವಾಗಿ ಬರುತ್ತದೆ."

ವರ್ತಕ ಕುಬೇರರೆಲ್ಲರೂ ನಗುತ್ತ ಎದ್ದು ಹೊರಬರುತ್ತ ಆ ನಗುವಿನ ಹಿಂದೇನು ಅಡಗಿತೆಯೊ ಗೊತ್ತಾಗಬೇಕು. !

ಸಮತಾವಾದಿಗಳಿಗೆ ಉಪದೇಶ.

ಸಮತಾವಾದವು ಜನ್ಮವೆತ್ತುತ್ತಿರುವ ಹೊಸ ಕ [illegible] ಇನ್ನೂ ನಮ್ಮ ದೇಶದಲ್ಲಿ ಕೇವಲ ವಾಗಾಡಂಭ [illegible] ಸರ್ಯವಸಾನವಾಗುವ ಪ್ರಮೇಯ ಉಂಟು. [illegible] ತಿವೃಷ್ಟಿಯಲ್ಲಿ ಕೂಗಾಡುವ ಸಂಭವವೂ ಉಂಟು. [illegible] ವೇಕ ವರ್ತನಗಳಾಗುವುದೂ ಸಾಧ್ಯ. ಆದುದರಿಂದ ಸಮ [illegible] ಜವಾಹರಲಾಲರು ಸಮತಾವಾದಿಗಳಾದ ಯುವಕರನ್ನೆ [illegible] ಸೇರಿಸಿಕೊಂಡು ಸಮತಾವಾದ ತತ್ವಪ್ರಚಾರಕ್ಕೆ ಅಷ್ಟು [illegible] ಯನ್ನು ವ್ಯಯ ಮಾಡಿದೆ. ಕಾರ್ಯಕ್ರಮಕ್ಕೆ ವಿಶೇಷ ಗ [illegible] ನ್ನು ಕೊಡುವಂತೆಯೂ, ತಲೆಯ ಹೊಸ ತತ್ವವನ್ನು [illegible] ಮಾಡುತ್ತಿರುವುದರಿಂದ ಇತರರಿಗೂ ತನಗೂ ಪೆ [illegible] ಭಾವಿಸದೆ ಸರ್ವಜನರ ಸಹಾನುಭೂತಿಯನ್ನು ಸ [illegible] ಡು ಕೆಲಸ ಮಾಡಬೇಕೆಂದು ಬುದ್ಧಿ ಹೇಳಿದರು.

ಬೊಂಬಾಯಿ ನಾಗರೀಕರೇ

ಬೊಂಬಾಯಿಯ ನಾಗರಿಕರು ಪಂ [illegible] ಭಕ್ತಿ ಗೌರವಗಳು ಅನನ್ಯವಾದುದು [illegible] ಹೋಗಿ ಮೂರು ನಾಲ್ಕು ವರ್ಷಗಳಾ [illegible] ವರನ್ನು ದೇವರಂತೆ ಕಂಡು ಸತ್ಕರಿ [illegible] ಪೌರ ಸಭೆಯವರು ಬಿನ್ನವತ್ತಳೆ ಕೊ [illegible] ಖ್ಯಾತವಾಗಿ ಬಿನ್ನಪತ್ರಗಳನ್ನು [illegible] ಪೌರರು ಅರ್ಪಿಸಿದ್ದಾರೆ.

ಪಂಡಿತರು ಈ ಪ್ರಸಂಗದಲ್ಲಿ [illegible] ಒಡಾಡಿದರೆಂದು ಹೇಳಬೇಕು. [illegible] ಸಮತಾವಾ [illegible]

ಕೊಡಗು

ಮೇ ತಾ. ೨೯ನೇ ಶುಕ್ರವಾರ ೧೯೩೯.

ಮದ್ರಾಸು ಸಹಕಾರಿಗಳ ಕೂಟ.

ಮದ್ರಾಸು ಪ್ರಾಂತ್ಯವು ಕೊಡಗಿನ ನೆರೆ ಪ್ರಾಂತ್ಯವಾಗಿರುವುದರಿಂದ ಅಲ್ಲಿಂದ ಇಲ್ಲಿಗೆ ಕೆಲವು ಪ್ರಾಂತೀಕ ಉದ್ಯೋಗಸ್ಥರನ್ನು ಎರವಾಗಿ ವರ್ಗಾಯಿಸುತ್ತಿರುವುದಲ್ಲದೆ ಹಲವು ಸಾರಿ ಅಲ್ಲಿಯ ರೂಲ್ಸು ರೆಗ್ಯುಲೇಶನ್‌ಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳಿಂದ ಇಲ್ಲಿ ಅನುಕರಿಸುವದುಂಟು. ಅಲ್ಲಿಯ ಸರ್ಕಾರಿ ಇಲಾಖಾ ಅಧಿಕಾರಿಗಳ ಅನುಭವದ ಫಲವನ್ನೂ, ತಜ್ಞರ ಅಭಿಪ್ರಾಯಗಳನ್ನೂ ಇಲ್ಲಿಆಗಿಂದಾಗ್ಗೆ ಉಪಯೋಗಿಸುವುದುಂಟು. ಆದುದರಿಂದ ಮದ್ರಾಸು ಪ್ರಾಂತ್ಯದ ಸಹಕಾರಿ ಚಳವಳಿಯ ಕುಂದುಕೊರತೆಗಳನ್ನು ಹೋಗಲಾಡಿಸಲು ಅಲ್ಲಿಯ ಪ್ರಮುಖ ಸಹಕಾರಿಗಳು ಸೇರಿ ಮಾಡಿದ ಚರ್ಚೆಯನ್ನು ಕುರಿತು ವಿಮರ್ಶಿಸುವುದು ವ್ಯರ್ಥವಾಗಲಾರದು. ಅದರಲ್ಲೂ, ಕೆಲವು ಸಮಯದ ಹಿಂದೆ ಕೊಡಗಿಗೆ ಬಂದು, ಇಲ್ಲಿಯ ಸಹಕಾರಿ ಚಳವಳಿಯ ಕುಂದು ಕೊರತೆಗಳನ್ನು ವಿಚಾರಿಸಿ ಕಂಡು ಹಿಡಿದು, ಅವುಗಳ ಸುಧಾರಣೆ ಬಗ್ಗೆ ಸೂಚನೆಗಳನ್ನು ಕೊಟ್ಟಂಥ ಮಾ. ರಾ ಯಂ. ಗಿರಿಯಪ್ಪನವರೇ ಈಗ ಅಲ್ಲಿ ರಿಜಿಸ್ಟ್ರಾರಾಗಿ ಅಲ್ಲಿಯ ಸಹಕಾರಿಗಳನ್ನು ಸೇರಿಸಿ ಅಭಿಪ್ರಾಯ ಕೇಳಿದ್ದಾಗಿದೆ.

ಈ ಕೂಟವು ಈ ತಾ. 23ರಲ್ಲಿ ಊಟಕಮಂಡಿನಲ್ಲಿ ಸೇರಿತ್ತು. ಈ ಮೊದಲು ಕೊಡಗಿಗೆ ಬಂದಿದ್ದ ಶ್ರೀಯುತ ವಿ. ರಾಮುದಾಸ್ ಪಂತುಲುರವರೇ ಮೊದಲಾದ ಸುಮಾರು 20 ಪ್ರಮುಖ ಸಹಕಾರಿ ಮುಂದಾಳುಗಳು ಸೆರೆದಿದ್ದರು. ಸೆಂಟ್ರಲ್ ಬ್ಯಾಂಕಿನಿಂದ ಗ್ರಾಮ ಸಂಘಗಳ ವರೆಗಿನ ಸಹಕಾರಿ ಸಂಸ್ಥೆಗಳ ರಚನೆಯ ಬದಲಾವಣೆ ಮತ್ತ ಈ ಸಂಸ್ಥೆಗಳ ಕೆಲಸಗಳಲ್ಲಿ ಕಂಡುಬರುವ ಕುಂದು ಕೊರತೆಗಳ ನಿವಾರಣೆ—ಇವೇ ಮುಂತಾದ ಮುಖ್ಯ ವಿಷಯಗಳು. ಈ ವಿಚಾರದಲ್ಲಿ ಸರ್ವಾನುಮತದ ಅಭಿಪ್ರಾಯವು ಸ್ಥಿರೀಕರಿಸಲ್ಪಡದಿದ್ದರೂ ಕೂಡ ಸಹಕಾರಿ ಸಂಸ್ಥೆಗಳ ಕಮಿಟಿಗಳಿಗೆ ಸದಸ್ಯರುಗಳನ್ನು ಸರ್ಕಾರದವರು ನೇಮಕ ಮಾಡಿದರೆ ಕಾರ್ಯಕಲಾಪಗಳು ಉತ್ತಮವಾಗಿ ನಡೆಯಬಹುದೆಂದೂ, ಕಮಿಟಿ ಮೆಂಬರುಗಳನ್ನು ಡೈರೆಕ್ಟ್ ಜೋಡೂ, ಮುನ್ಸಿಪಾಲಿಟಿ ಮುಂತಾದ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಂದ ಇಲ್ಲವೆ ಸಹಕಾರಿ ಸಂಸ್ಥೆಗಳಲ್ಲಿ ಪಾಟೀ ಭೇದಗಳುಂಟಾಗದೆ ಕೆಲವು ಉದ್ಯೋಗಸ್ಥರ ಸಹಾಯತೆ

[illegible]ಜನೆಗಳನ್ನು ಅಲ್ಲಿ ನೆರೆದಿದ್ದ ಸುಮಾರು [illegible] ನ್ಯಾಯವಾಗಿಯೂ ಸಾಧ್ಯವಾಗಿಯೂ ಮಾಡಲ್ಪಟ್ಟಿತ್ತೆಂದೂ ಕಮಿಟಿಗಳನ್ನು ನೇಮಿಸುವುದು ಸ್ವಜಾತಪ್ರತಿನಿಧಿತ್ವ ತತ್ವಕ್ಕೆ ವಿರುದ್ಧವಾಗಿದೆಂದೂ ಹಾಗೆ ಮಾಡಕೂಡದೆಂದೂ, ಅವಶ್ಯ ಅನುಭವವುಳ್ಳ ಬೇರೆಯವರನ್ನು ಕಮಿಟಿಗೆ ಸೇರಿಸಿ [illegible] ಅಧಿಕಾರವನ್ನು ಕಮಿಟಿಗೆ ಕೊಡಬಹುದೆಂದೂ ಕೂಡ ಸೂಚನೆ ಕೊಟ್ಟಿದ್ದು ಯೋಗ್ಯವಾಗಿದೆ. ಮದ್ರಾಸ್ಯದ ಸಂಘಗಳಲ್ಲಿರುವಂತೆಯೇ ಕೊಡಗಿನ ಕೆಲವು ಪೈಸಿಡೆಂಟರು ಮತ್ತು ಕಮಿಟಿ ಮೆಂಬರುಗಳು ಅಧಿಕಾರವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗ ಮಾಡಿಕೊಂಡು ಬರುತ್ತಿದೆ. ಕಮಿಟಿ ಮೆಂಬರುಗಳಾಗಿ ಸಾಲ ಮಂಜೂರುಮಾಡಿಕೊಳ್ಳುವಲ್ಲಿ ಸ್ವಂತವಾಗಿ ಸಾಲ ವಾಪಸು ಬರುವಲ್ಲಿ ಸಾಲಕೊಟ್ಟ ನಂತರವೇ [illegible] ಜೀಯನ್ನು ವಿಚಾರಿಸುವೆನೆಂಬ ಪುಕಾ [illegible] ಇದು ಸಹಕಾರಿ ತತ್ವಕ್ಕೆ ಪೂರ್ [illegible] ಧಪಟ್ಟ ಅಧಿಕಾರಿಗಳು ಇದನ್ನು [illegible] ದ ಅಡಗಿಸಬೇಕಲ್ಲದೆ ಪರಸ್ಪರ [illegible] ದ ಮೆಂಬರುಗಳಿಗೆ ಮುಂದಟ್ಟಾಗು [illegible] ಲಸವನ್ನೂ ಮಾಡಬೇಕ [illegible].

ಮಿಟಿ ಮೆಂಬರುಗಳನ್ನು ಸ್ಥಳೀ ಸದಸ್ಯರುಗಳಾಗಲು ಬಿಡುವಾದ ಕೆಲಸ ಕಾರ್ಯಗಳನ್ನು ನಡಿಸಲು [illegible] ಸಾಹಾಯ್ಯವು ದೊರೆಯಲಾ [illegible]

ರಾಗಿರುವರುವರು. ಆದುದರಿಂದ ಈ ತರಹದ ಒಡಕಿನ ಭಾವನೆಗಳು ಸಹಕಾರಿ ಸಂಸ್ಥೆಗಳಲ್ಲಿ ಉಂಟಾಗದಂತೆ ಉಭಯ ಕಡೆಯವರು ಪ್ರಯತ್ನಿಸಬೇಕಾಗಿದೆಯೆಂಬುವುದನ್ನು ಎಲ್ಲರೂ ಒಪ್ಪಬೇಕಾಗಿದೆ. ಕೊಡಗಿನಲ್ಲಿ ಇಂಥಾ ಒಡಕಿನ ಭಾವನೆಗಳು ಹೆಚ್ಚಾಗಿ ಹರಡಿರುವುದಿಲ್ಲ. ಅದು ಹರಡದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ.

ಪಟ್ಟಣ ಸಂಘಗಳನ್ನು ವಿಶೇಷ ಜವಾಬ್ದಾರಿಯವಾಗಿಯೂ, ಗ್ರಾಮ ಸಂಘಗಳನ್ನು ಅತಿಶಯ ಜವಾಬ್ದಾರಿಯವಾಗಿಯೂ ಇಡಬೇಕೆಂಬುವುದೇ ಅಲ್ಲಿ ನೆರೆದಿದ್ದವರಲ್ಲಿ ಬಹುಮತದವರು ಅಭಿಪ್ರಾಯ. ಈಗ ಜಾರಿಯಲ್ಲಿರುವುದೇ ಹಿಂಗೆ. ಇದನ್ನು ಬದಲಾಯಿಸುವ ಅವಶ್ಯಕತೆಯೇನೂ ಕಾಣುವುದಿಲ್ಲ.

ಮದ್ರಾಸು ಪ್ರಾಂತ್ಯದಲ್ಲಿ ಸಹಕಾರಿ ಯೂನಿಯನ್ನುಗಳು ಈ ಮೊದಲು ಚೆನ್ನಾಗಿ ಕೆಲಸ ಮಾಡುತ್ತಿರಲಿಲ್ಲ. ಇತ್ತಲಾಗಿ ಅಭಿವೃದ್ಧಿಯಾಗುತ್ತಿವೆ. ಅವುಗಳನ್ನು ಒಲಪಿಸುವುದಕ್ಕಾಗಿ ಅವುಗಳ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಬೇಕೆಂದೂ, ವೇತನ ಕೊಟ್ಟು ಮೇನೇಜರುಗಳನ್ನು ನೇಮಿಸಬೇಕೆಂದೂ ಸೂಚಿಸಲಾಯಿತು. ಇದು ಕೊಡಗಿನ ಸಹಕಾರಿಗಳೂ ಲಕ್ಷ್ಯವಿಡಬಹುದಾದ ಸೂಚನೆಯಾಗಿದೆ.

ವಾಯಿದೆ ಮೀರಿದ ಸಾಲಗಳು ಹೆಚ್ಚಾಗದಿರುವುದನ್ನು ತಡೆಯಬೇಕೆಂದೂ, ಅವುಗಳನ್ನು ವಸೂಲು ಮಾಡಲು [illegible] ಶ್ರಮವಹಿಸಬೇಕೆಂದೂ ಚರ್ಚಿಸಲಾಯಿತು. [illegible]ಗಿ ಬ್ಯಾಂಕುಗಳ ಸಿಬ್ಬಂದಿಯಜೊತೆಗೆ ಸರ್ಕಾರಿ ಉದ್ಯೋಗಸ್ಥರೂ ಸಹಕರಿಸಬೇಕೆಂದು ಸೂಚಿಸಲಾಯಿತು. ಅನ್ಯತ್ರ ವಿರುವಲ್ಲಿ ಪೂರ್ತಿ ಹೆಚ್ಚಿನ ಸಮಯ ಕೊಟ್ಟು, ಸುಗುಮವಾಗಿ ಸಾಧ್ಯವಿದ್ದಲ್ಲಿ, ನಿರ್ದಾಕ್ಷಿಣ್ಯವಾಗಿ [illegible] ಜರುಗಿಸದಿದ್ದಲ್ಲಿ ಸಂಘಗಳ ಮುಂದಿನ [illegible] ಹೀನಾವಸ್ಥೆಗೆ ಇಳಿಯುವುದರಲ್ಲಿ ಸಂಶಯವಿಲ್ಲ. [illegible] ಸಹಕಾರಿ ಸಂಸ್ಥೆಗಳನ್ನು ಪರಿಶೀಲಿಸುವ [illegible] ಯೀಜನೆಯನ್ನು ತಡಮಲೆ ಜಾರಿಗೆ [illegible] ದೊರೆಯಿತು. [illegible] ಸಂಸ್ಥೆಗಳನ್ನು ಹೆಚ್ಚಿಸುತ್ತಾ ಹೋಗುವುದಕ್ಕಿಂತ [illegible] ಸಂಸ್ಥೆಗಳನ್ನು ಸಮರ್ಪಕವಾಗಿ [illegible] ಉದ್ಯೋಗಸ್ಥರೂ, ಉದ್ಯೋಗ [illegible] ರೂ ವಿಶೇಷವಾಗಿ ಸಹಕಾರಿಯಾಗಿರಬೇಕಾಗಿ [illegible]

ಕಾಂಗ್ರೆಸ್ಸಿನ [illegible]



ಶ್ರೀ ಸತ್ಯಮೂರ್ತಿಯವರ ಭಾಷಣ.

ಕೊಯಂಬುತ್ತೂರಿನ [illegible] ಎಸೋಸಿಯೇಶನ್ ಶ್ರೀ ಸತ್ಯಮೂರ್ತಿ [illegible] ಕಾಂಗ್ರೆಸ್ [illegible] ದ್ದೇಶಗಳನ್ನು ಕುರಿತು ಒಂದು ಭಾಷಣ ಕೊಡಬೇಕೆಂದು ಆಮಂತ್ರಿಸಿದ್ದರು. [illegible] ಪ್ರಕಾರ ಭಾಷಣವಿತ್ತರು:—

'ಕಾಂಗ್ರೆಸು ಭಾರತದಲ್ಲಿನ ಯೂರೋಪಿಯನ್ ನಿವಾಸಿಗಳ ಹಕ್ಕು [illegible] ಭಾರತದ ಹಿತದ ದೃಷ್ಟಿಯಿಂದ ಅವರ ಹಕ್ಕು ಬಾಧ್ಯತೆಗಳನ್ನು ಮನ್ನಿಸುವುದು 1935ನೇ ಇಂಡಿಯಾ ಆಕ್ಟಿನಲ್ಲಿ, ಭಾರತದ ಯೂರೋಪಿಯನ್ ನಿವಾಸಿಗಳ ಹಿತ ಸಾಧನೆಗಾಗಿ ವಿಶೇಷ [illegible] ದ್ದರೂ ಕೂಡ, ಹಿಂದೀಯರು ಅವರಿಗೆ [illegible] ಆ ಭದ್ರತೆಗಳಿಂದ ಏನೂ ಪ್ರಯೋಜನ [illegible] ಯವಾಗಿ [illegible] ಮ [illegible] ನ [illegible]

ಕಾಂಗ್ರೆಸ್ಸಿನ ಧ್ಯೇಯ.

ಪೂರ್ಣ ಸ್ವರಾಜ್ಯವೇ ಕಾಂಗ್ರೆಸ್ಸಿನ ಪ್ರಥಮ ಧ್ಯೇಯ. ಇದರಿಂದ ಭಾರತಕ್ಕೂ ಇಂಗ್ಲೆಂಡಿಗೂ ಇರುವ ಬಾಂಧವ್ಯವು ಮುರಿಯಲ್ಪಡುವದೆಂದರ್ಥವಲ್ಲ. ಅದು ಆಗಿನ ಸಮಯದಲ್ಲಿ ಈ ಎರಡು ದೇಶಗಳ ಅನ್ಯೋನ್ಯ ವರ್ತನೆಯನ್ನನುಸರಿಸಿರುತ್ತೆ. ಹೆಚ್ಚಾಗಿ ಇಂಗ್ಲೆಂಡಿನ ಮೇಲೆಯೇ ಈ ಬಾಂಧವ್ಯದ ರಕ್ಷಣೆಯೂ ಮುರಿಯುವಿಕೆಯ ಜವಾಬ್ದಾರಿಯು ಇರುತ್ತೆ. ಈಗ ಒಂದು ಕಡೆಯಿಂದ ಇಟಲಿಯೂ, ಮತ್ತೊಂದು ಭಾಗದಿಂದ ಜಪಾನೂ ಇನ್ನೊಂದು ಪಾರ್ಶ್ವದಿಂದ ರಷ್ಯವೂ ಅತೀ ಪ್ರಬಲಗೊಳ್ಳುತ್ತಿರುವಾಗ ಬ್ರಿಟಿಷ್ ಚಕ್ರಾಧಿಪತ್ಯದ ಹಿತದ ದೃಷ್ಟಿಯಿಂದ ಇಂಗ್ಲೆಂಡಿಗೆ ಭಾರತದ ಕೇಳಿಕೆಗಳನ್ನು ಮನ್ನಿಸಿ ಅದರೊಡನೆ ಬಾಂಧವ್ಯವನ್ನು ಉಳಿಸಿಕೊಳ್ಳುವುದು ಶ್ರೇಯಸ್ಕರ.

ಆದರೆ 1935ನೇ ಇಂಡಿಯಾ ಆಕ್ಟನ್ನು ನೋಡಿದರೆ ಇಂಗ್ಲೆಂಡಿಗೆ ಭಾರತದೊಡನೆ ಬಾಂಧವ್ಯವನ್ನುಳಿಸಿಕೊಳ್ಳಬೇಕೆನ್ನುವ ಅಭಿಲಾಷೆಯೇ ಇಲ್ಲದಂತೆ ತೋರುತ್ತೆ. ಕಾಂಗ್ರೆಸು ಸದಾ ಅಹಿಂಸಾ ತತ್ವವನ್ನೇ ಪ್ರತಿಪಾದಿಸಿದೆ. ಈ ವಿಷಯದಲ್ಲಿ ಸರ್ ಹೆನ್ರಿ ಕ್ರೇಕರು ಕಾಂಗ್ರೆಸಿನ ಮೇಲೆ ಅಕಾರಣವಾದ ಅಪವಾದವನ್ನು ಹೊರಿಸಿದ್ದಾರೆ.

ಕಾಂಗ್ರೆಸೂ, ಸಮತಾವಾದವೂ.

ಈಗಿನ ಕಾಂಗ್ರೆಸು ಅಧ್ಯಕ್ಷರು ಸಮತಾವಾದಿಗಳಾಗಿದ್ದರೂ ಕಾಂಗ್ರೆಸು ಸಂಸ್ಥೆಯ ಸಮತಾವಾದವನ್ನು ಅಂಗೀಕರಿಸಿರುವುದಿಲ್ಲ. ಸಮತಾವಾದವು [illegible]ಸಿಗಿ ಆಸ್ತಿಗಳನ್ನು ನಿರ್ಮೂಲ ಮಾಡಬೇಕೆಂದೆನ್ನುತ್ತದೆ. ಆದರೆ ಕಾಂಗ್ರೆಸಿನಲ್ಲಿ ಈ ವಿಷಯದಲ್ಲಿ ಎಲ್ಲರಿಗೂ ಹಿತಕಾರಿಯೂ ಗುವ ವಿಧಾನದಲ್ಲಿ ವಿಶ್ವಾಸವಿದ್ದು, ದೊಡ್ಡ ಕಾರ್ಮಿಕಗಾರಿಗಳನ್ನು ರಾಷ್ಟ್ರೀಯ ಕಾರ್ಮಿಕಗಾರಿಯಂಗಿ ಮಾಡುವದು ಮುಂತಾದ ಕಾರ್ಯಕ್ರಮಗಳಿವೆ. ಆದ್ದರಿಂದ ಭಾರತದ ಭೂಮಿಯವಾಲಗಾರರೂ ಮತ್ತಿತರರೂ ಒಟ್ಟು ಸೇರಿ ಕಾಂಗ್ರೆಸ್ಸಿಗೆ ಬೆಂಬಲವಿತ್ತು ಶಾಂತವಾಗಿ ಪರಿಹಾರವನ್ನು ಅನುಭವಿಸಬೇಕು ಅನ್ನುವ [illegible]ವಾಗಿದ್ದು ಮುಂದಕ್ಕೆ ಲಗುಬಗೆಯಾಗಿ ಕಾರ್ಯಕ್ರಮಗಳನ್ನು [illegible]ತ್ತಾಗುವುದು. ಆದ್ದರಿಂದ ಯೂರೋಪಿಯನ್ನರು [illegible] ಒಡನೆ ಕಾಂಗ್ರೆಸ್ಸಿನ ರಾಜ್ಯಾಂಗ [illegible] ಮುಂದಿನ ರಾಜ್ಯಾಂಗ ರಚನೆಯಲ್ಲಿ [illegible] ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ಅವರಿಗಿರುವ ಸಂಶಯಗಳನ್ನು ಕಳಕೊಳ್ಳುವಲ್ಲಿ ಪ್ರಯತ್ನಿಸಬೇಕಾಗಿದೆ.

ಪಂಥಾಹ್ವಾನ ಸ್ವೀಕಾರ.

[illegible] ಪಂಥಾಹ್ವಾನ [illegible] ಎಂಬ ಶೀರ್ಷಿಕೆಯಲ್ಲಿ [illegible] ಕೃಷಿಯಿಂದ [illegible] ಭಾರತದಲ್ಲಿ [illegible] ಬಿಲ್ಲಿಗೆ [illegible] ಸಮಾಜವಾದಿಗಳ

ನೋಟೀಸು.

ಕೊಡಗು ಜವಿನ್ದಾರರ ಸಂಘದ 23 ನೇ ವಾರ್ಷಿಕ ಜನರಲ್ ಮೀಟಿಂಗು ಈ ಮೊದಲು ನಿಶ್ಚಯಿಸಿದ್ದಂತೆ ಜೂನ್ ತಾ. 1ರಲ್ಲಿ ನಡೆಯದೆ, ಜೂನ್ ತಾ. 6 ನೇ ಶನಿವಾರ ವೀರಾಜಪೇಟೆಯಲ್ಲಿ ಜರಗುವುದು. ಬಳ್ಳಾರಿಯಲ್ಲಿ ವಕೀಲರಾಗಿರುವ ಶ್ರೀಯುತ ಚೆಪ್ಪುಡಿರ ಟಿ ಮೂಜಯ್ಯ, ಬಾರ್-ಎಟ್-ಲಾ ರವರು ಸಭೆಯ ಅಧ್ಯಕ್ಷರಾಗಲು ಒಪ್ಪಿರುವರು. ಸಭೆಯು ಬೆಳಿಗ್ಗೆ 10½ ಗಂಟೆಗೆ ಪ್ರಾರಂಭವಾಗಿ ಸಾಯಂಕಾಲದೊಳಗೆ ಮುಗಿಯುವುದು. ಮೆಂಬರುಗಳೆಲ್ಲರಿಗೂ ಮಧ್ಯಾಹ್ನದ ಊಟಕ್ಕೆ ಏರ್ಪಾಡು ಮಾಡಲಾಗುವುದು. ಮಹಾ ಸಭೆಯಲ್ಲಿ ಚರ್ಚಿಸಲಿಕ್ಕಿರುವ ವಿಷಯಗಳನ್ನು ಜೂನ್ ತಾ 4 ರೊಳಗೆ ಜನರಲ್ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮಹಾ ಸಭೆಗೆ ಮೆಂಬರುಗಳೆಲ್ಲರೂ ದಯಮಾಡಿಸಬೇಕೆಂತಲೂ ಕೋರುತ್ತೇನೆ.

ವಿಷಯ ನಿಯಮಕ ಸಮಿತಿಯು ಅಂದರೆ ಸಂಘದ ಕಾರ್ಯಕಾರಿ ಮಂಡಳಿಯು ಒಂದು ದಿನ ಮುಂಚಿತವಾಗಿ ಸಾಯಂಕಾಲ 5 ಗಂಟೆಗೆ ಅದೇ ಸ್ಥಳದಲ್ಲಿ ಕೂಡಿ, ಸಭೆಗು ಮುಂದಿಡುವ ಸಂಗತಿಗಳನ್ನು ನಿಶ್ಚಯಿಸುವುದು. ಮೆಂಬರುಗಳೆಲ್ಲರೂ ತಮ್ಮ ವಾರ್ಷಿಕ ಚಂದಾ 4 ಆಣೆಯನ್ನು ಕೂಡಲೆ ಸಾವತಿ ಮಾಡಬೇಕೆಂದೂ, ಇಲ್ಲವಾದರೆ ಏಪ್ರಿಲಿಂಗಿಗೆ ಬರುವಾಗ ತಂದು ಸಲ್ಲಿ ಮಾಡಬೇಕೆಂದೂ ಕೋರಲಾಗಿದೆ.

ಕೊಡಗು ಜವಿನ್ದಾರರ ಸಂಘ, ಐ. ಪಿ. ಕಾರ್ಯಪ್ಪ,
ಮಡಿಕೇರಿ, 28—5—'36, (ಜನರಲ್ ಸೆಕ್ರೆಟರಿ).

ವರ್ತಮಾನ ಸಂಗ್ರಹ.

ಬಳಬೇಶ.

ಶಿಕೆ ಕಾಲದ ರಜೆ ತೀರಿ ಕೊಡಗಿನ ಸಿವಿಲ್ ಕೋರ್ಟುಗಳು ಈ ತಾ. 27ನೇ ಬುಧವಾರ ಪುನಹ ತೆರೆಯಲ್ಪಟ್ಟಿವೆ.

ಬೇಸಿಗೆಯ ರಜೆ ಮುಗಿದು ವೀರಾಜಪೇಟೆ ಹೈಸ್ಕೂಲು ಈ ತಾ. 25ರಲ್ಲಿ ತೆರೆಯಲ್ಪಟ್ಟಿದೆ. ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಜೂನ್ ತಾ 1ರಲ್ಲಿ ತೆರೆಯಲ್ಪಡುವುದು.

ಮಳೆಯು ದಿನೆದಿನೆಂದು ಕಾವೇರಿ ಹೊಳೆಯು ಬೇಕಾದ ಕಡೆಯಿಂದ ಮತ್ತೆ ಕೊಟ್ಟಮುಡಿ ಕಡೆಯಿಂದ ಹಂಗಾಮಿ ಸೇತುವೆಗಳು ಕಳೆದ ವಾರ ಮುರಿದು ಹೋಗಿ ಈಗ ದೋಣಿಯ ಮೂಲಕ ಪ್ರಯಾಣಾಟುಗಳು ನಡೆಯುತ್ತಿವೆ

ಮಡಿಕೇರಿಯಲ್ಲಿ ಮೇ ತಾ. 18ರಿಂದ 22ರ ವರೆಗೆ 3 ಇಂಚು 57 ಸೆಂಟೂ, ತಾ 22ರಿಂದ 29ರ ವರೆಗೆ 4 ಇಂಚು 5 ಸೆಂಟೂ ಮಳೆಯಾಗಿದೆ. ಪ್ರತಿ ದಿವಸವೂ ವೇಡ ಕವಿದುಕೊಂಡು ಮಳೆ ಬೀಳುತ್ತಾ ಇದೆ.

ಕೊಯಂಬತ್ತೂರು ಅಗ್ರಿಕಲ್ಚರ್ ಕಾಲೇಜಿನಲ್ಲಿ ಮೂರು ವರ್ಷಗಳ ತರಬೇತು ಬಗ್ಗೆ ಮೆ. ಕಾಡುಮಂಡ ಯಂ. ಐಯ್ಯಪ್ಪನವರನ್ನು ಮತ್ತು ಮೆ. ಪಟ್ಟಮಾಡ ಯಂ. ಸೋಮಣ್ಣ ಬಿ. ಎ. ಯವರನ್ನು ಕಮಿಷನರವರು ಈ ತಾ. 29ರಲ್ಲಿ ಆರಿಸಿರುವರು.

ಮೆ. ಪಟ್ಟಮಾಡ ಪಿ. ಅಪ್ಪಚ್ಚನವರು ಮದ್ರಾಸು ಯುನಿವರ್ಸಿಟಿಯ ಎಲ್. ಯಂ. ಪಿ (ಮೆಡಿಕಲ್) ಪರೀಕ್ಷೆಯಲ್ಲಿಯೂ, ಮೆ ಕುಂಞಿಳಿಯಂಡ ಪಿ. ಮಾದಪ್ಪನವರು ಇಂಟರ್ ಎಂಡಿಯೇಟ್ ಪರೀಕ್ಷೆಯಲ್ಲಿಯೂ ಪಾಸಾಗಿರುವರೆಂದು ಇತ್ಯಲಾಗಿ ತಿಳಿಯುತ್ತೇವೆ. ಇವರನ್ನು ಅಭಿನಂದಿಸುತ್ತೇವೆ.

ಈ ತಾ. 25ರಲ್ಲಿ ಚೇರಳ ಶ್ರೀಮಂಗಲ ಗ್ರಾಮದ ಮೆ. ಕೊಂಗಟ್ಟಿರ ಮೇದಪ್ಪನವರ ಮಗ ಮೂಜಯ್ಯನವರು ಕೆಲವರೊಂದಿಗೆ ಬೇಟೆಗೆ ಹೋಗಿದ್ದಲ್ಲಿ ಬೇಟೆಗಾರನೊಬ್ಬನು ಸಾಯಿಕಾಲಿಗೆ ಮುಟ್ಟಿ ಕೆಳಗೆ ಬಿದ್ದಾಗ್ಯೆ ಅವನ ಕೋವಿಯಿಂದ ಹಾರಿದ ಗುಂಡು ಅಕಸ್ಮಾತ್ತು ಮೂಜಯ್ಯನವರಿಗೆ ತಗಲಿ ಅವರು ಮೃತರಾದರೆಂದು ವರ್ತಮಾನ.

ಮಡಿಕೇರಿಯಲ್ಲಿ ಪಾಠಶಿಕ್ಷೆಯವರನ್ನು ಗಲ್ಲಕೇರಿಸುವ ಮನೆಯನ್ನು ಈ ತಾ. 24ರಲ್ಲಿ ಜೈಲು ವಾರ್ಡರ್ ಕೇಕಡ ಪೂವಯ್ಯನವರು ಕೆಲವು ಕೈದಿಗಳ ಸಮೇತ ಶುಚಿಮಾಡಲು ಹೋಗಿ ಗುಂಡಿಯ ಮೇಲ್ಗಿನ ಬಾಗಿಲನ್ನು ಬಿಚ್ಚಿದಾಗ್ಯೆ ಅದು ಫಕ್ಕನೆ ಕೆಳಗೆ ಜಾರಲು ಅದನ್ನು ಬಿಚ್ಚಿದ ಪೂವಯ್ಯನವರು ಗುಂಡಿಗೆ ಬಿದ್ದು ಮೃತರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಕೊಡಗು ಜವಿನ್ದಾರರ ಸಂಘದ ಮಹಾ ಸಭೆಯು

ಜೂನ್ ತಾ. 1ನೇ ಸೋಮವಾರ ನಡೆಯಲಿಕ್ಕಿದ್ದದ್ದು ಜೂನ್ ತಾ. 6ನೇ ಶನಿವಾರ

ವೀರರಾಜೇಂದ್ರಪೇಟೆಯಲ್ಲಿ ಜರಗುವದು.

ಅಧ್ಯಕ್ಷರು:—ಬಳ್ಳಾರಿಯ ವಕೀಲರಾದ ಶ್ರೀ. ಸಿ. ಟಿ ಮೂಜಯ್ಯನವರು, ಬಾರ್—ಎಟ್—ಲಾ.

ಬಳ್ಳಾರಿಯಲ್ಲಿ ಲಾಯರಾಗಿರುವ ಮೆ. ಚೆಪ್ಪುಡಿರ ಟಿ. ಮೂಜಯ್ಯ ಬಾರ್-ಎಟ್-ಲಾರವರ ಅಧ್ಯಕ್ಷತೆಯಲ್ಲಿ ನಡೆಸುವಂತೆ ನಿಶ್ಚಯಿಸಲಾಗಿದೆ.

ಈ ತಾ. 23ನೇ ಶನಿವಾರ ದಿನ ಸಾಯಂಕಾಲ ಸಾಧಾರಣ ಆರು ಗಂಟೆ ಸಮಯಕ್ಕೆ ಎಷ್ಟುಕಡು ದೋಣಿ ಕಡುವಿನಲ್ಲಿ ಚಿತ್ಕಭ್ರಮೆಯಿಂದಿದ್ದ ಒಬ್ಬನು ಹೊಳೆಗೆ ಬಿದ್ದು ಮುಳುಗುತ್ತಾ, ಏಳುತ್ತಾ ಇದ್ದ ಸಮಯದಲ್ಲಿ, ಈಗ ಮಡಿಕೇರಿ ಹೈಸ್ಕೂಲಿನಲ್ಲಿ ಸೈಟು ತರಬೇತು ಹೊಂದಿ ಬಂದವಂಲೊಬ್ಬರಾದ ಕೊಟ್ಟೂರು ಶಾಲಾ ಹೆ. ಮಾ. ನಾಳ್ಯಂಡ ಕಾಳಪ್ಪನವರು ಕಂಡು ಕೂಡಲೆ ಹೊಳೆಗೆ ದುಮುಕಿ ಇತರರೊಬ್ಬರ ಸಾಹಾಯದಿಂದ ಅವನನ್ನು ದಡಕ್ಕೆ ತಂದು ಪ್ರಥಮ ಚಿಕಿತ್ಸೆಯನ್ನು ಮಾಡಿ ಜೀವವನ್ನುಳಿಸಿದರಂತಾಗಿ ವರ್ತಮಾನ.

[redacted]ರಾಜಪೇಟೆಯ ಲೇಟ್ ಸಾಹುಕಾರ್ ದೋ ತತ ಲೋ[redacted]ರವರ ಮಗ ಮೆ. ಪ್ಯಾಟ್ರಿಕ್ ಲೋಬೋರವರು ಈ ತಾ 23 ರಲ್ಲಿ ಮದನದಳ್ಳಿಯಲ್ಲಿ ಕ್ಷಯರೋಗದಿಂದ ಸ್ವರ್ಗಸ್ಥರಾದರೆಂದು ತಿಳಿದು ವ್ಯಸನಪಡುತ್ತೇವೆ. ಇವರು ವೀರಾಜಪೇಟೆ ಮುನ್ಸಿಪಾಲಿಟಿಯ ಪ್ರಥಮ ಚುನಾಯಿತ ಪ್ರೆಸಿಡೆಂಟರಾಗಿದ್ದರು. ಕೆಲವು ಸಮಯದ ಹಿಂದೆ ಇವರು ಸಾರ್ವಜನಿಕ ಕಾರ್ಯಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇವರ ಅಕಾಲ ಮರಣದಿಂದ ಅವರ ಕೈಕ್ಕ ಕೋಮಿನವರಿಗೆ ಮಾತ್ರವಲ್ಲ ಇಡೀ ಕೊಡಗಿಗೇ ನಷ್ಟ ಉಂಟಾಗಿದೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನಿಂದ ಪರೀಕ್ಷೆಗೆ ಕೂತ ಈ ಕೆಳಗಿನ 8 ವಿದ್ಯಾರ್ಥಿನಿಯರೆಲ್ಲರೂ ಪಾಸಾಗಿರುವರು—ಶ್ರೀಮತಿಗಳಾದ ನಡಿಕೇರಿಯಂಡ ಸಿ. ಬೋಜಮ್ಮ, ಪಾಂಡಂಡ ದೇಚಮ್ಮ, ಆದೇಂಗಡ ಮೂಚಮ್ಮ, ಕಂಜಿತಂಡ ಮೂಚಮ್ಮ, ಮಂಡೇಪಂಡ ಮುತ್ತಮ್ಮ, ಪಾಲೇಕಂಡ ಮುತ್ತಮ್ಮ, ಕೂಡಂದೆರ ಗಂಗಮ್ಮ ಮತ್ತು ಕಾಡುಮಂಡ ಯಂ. ಸುಬ್ಬಮ್ಮನವರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 17 ವಿದ್ಯಾರ್ಥಿಗಳಲ್ಲಿ ಈ ಕೆಳಗಿನ 7 ಜನರು ತೇರ್ಗಡೆಯಾಗಿರುವರು—ಮೆ. ಗಳಾದ ಮಂಡೇಪಂಡ ಯಂ. ಅಪ್ಪಯ್ಯ, ಮನೆಯಪಂಡ ಎ ಬೆಳ್ಯಪ್ಪ, ಚಂಗಂಡ ಯಸ್. ಕಾರ್ಯಪ್ಪ, ಪಿ ಗುಂಗಾಧರ ವೆಂಡಲಿಯೂರ್, ಜಿ. ಕೃಷ್ಣರಾಜು, ಅವರೆಮೂದಂಡ ಯಂ ಕುಟ್ಟಪ್ಪ ಮತ್ತು ಚೇರಂಡ ಎ ಪೊನ್ನಪ್ಪನವರು.

ವೀರಾಜಪೇಟೆ ಹೈಸ್ಕೂಲಿನಿಂದ ಪರೀಕ್ಷೆಗೆ ಕೂತ 25 ವಿದ್ಯಾರ್ಥಿಗಳಲ್ಲಿ 11 ಮಂದಿ ಪಾಸಾಗಿರುವರೆಂದು ವರ್ತಮಾನ. ಇವರ ಹೆಸರುಗಳನ್ನು ಬರುವ ವಾರ ಪ್ರಕಟಿಸಲಾಗುವುದು.

ಇವರಲ್ಲದೆ, ಇನ್ನೂ ಕೆಲವರ ಹೆಸರುಗಳನ್ನೊಳಗೊಂಡ ಇನ್ನೊಂದು ಪಟ್ಟಿಯು ಪ್ರಕಟವಾಗುವದೆಂದು ಸೂಚಿಸಲಾಗಿದೆ. ತೇರ್ಗಡೆಯಾದವರನ್ನೆಲ್ಲಾ ಅಭಿನಂದಿಸುತ್ತೇವೆ.

ಹಿಂದೂದೇಶ.

ರಾಮು ಜಾನಂ ಪಾಂಡಿ ಎಂಬವನನ್ನು ಅನ್ಯಾಯವಾಗಿ ಜೈಲಲ್ಲಿ ಇರಿಸಿ ದಂಡಿಸಿದುದಕ್ಕಾಗಿ ಅರಾದ ಪೊಲೀಸ್ ಸಬ್ ಇನಸ್ಪೆಕ್ಟರ್ ಕೆ ಕೆ ಆಲಿಯವರಿಗೆ ೪ ತಿಂಗಳು ಕಠಿಣ ದಂಡನೆ.

ಇದೇ ಜೂನ್ ೧ ರಿಂದ ಸಿಲ್ಹೆಟಿನಲ್ಲಿ ಅಸಾಂ ಸರಕಾರವು ಯುವಕರಿಗೆ ಸಾಬೂನು ತಯಾರಿಕೆಯಲ್ಲಿ ಶಿಕ್ಷಣ ಕೊಡಲು ಒಂದು ಶಾಲೆಯನ್ನು ತೆರೆಯುವುದು. ಇಲ್ಲಿ ಈ ಶಿಕ್ಷಣವು ಉಚಿತವಾಗಿ ಕೊಡಲ್ಪಡುವದು.

ಹುಡುಗರಿಗೆ ಈಗಿನ ರಾಜಕೀಯ ವಿದ್ಯಮಾನಗಳು ತಿಳಿ[illegible] ಕೊಲಿಸುವಂತೆ ಮಿಡ್ನಾಪುರ ಜಿಲ್ಲೆಯ ಎಲ್ಲಾ ಶಾ[illegible]ಡಿಯೊ ಸೆಟ್ಟುಗಳನ್ನು ಇಡಲಿವರು. ಇವ[illegible] ಉಚಿತವಾಗಿ ಒದಗಿಸುವುದು.

[illegible]ಸುರಿತು ಪೂ[illegible] ಜೈ[illegible]ನ್.

ಕೃಷ್ಣಘರ ಜೈಲಿನಲ್ಲಿ ತನ್ನನ್ನು ಇರಿಸಿದ್ದಾಗ, 100 ದಿ[illegible]ಗಳ ವರೆಗೆ ಉಪವಾಸವ್ರತವನ್ನಾಚರಿಸಿ, ಅನಂತರ ಪಂಡಿತ [illegible]ಹ್ಮರಲಾಲರ ಸೂಚನೆಯ ಮೇರೆಗೆ ೨೨ ದೀಕ್ಷೆಯನ್ನು ಕೈಬಿ[illegible] ಶ್ರೀ. ಪ್ಯಾಟ್ಲು ಚಂದ್ರ, ಮುಲ್ಲಿಕ್‌ರವರನ್ನು, ಚಿತ್‌ಗಾಂಗ್ [illegible]ಲ್ಲೆಯ ಅವರ ಮನೆಗೆ ನರ್ಗಾಯಿಸಿ ಅಲ್ಲಿ ಅವರ ಮೇಲೆ [illegible]ರ್ಬಂಧ ಹಾಕಿದ್ದಾರೆ.

ನೈರುತ್ಯಾಮರ ಹೈದರಾಬಾದಿನಲ್ಲಿ ಶ್ರೀ. ಟಿ. ಬಿ. ಸುಂ[illegible] ರಾಜಾರಿ ಎಂಬ ಹೈಕೋರ್ಟು ಪ್ಲೀಡರರು ಸೈಕಲ್ ಮೇ[illegible] ಆ ನಗರದಲ್ಲಿ ಸಂಚರಿಸುತಿದ್ದಾಗ, ಡ್ಯೂಟಿಯ ಮೇಲಿದ್ದ ಸ[illegible]ಲೀಸನು, ಸೈಕಲ್ ನಿಲ್ಲಿಸಬೇಕೆಂದು ಸಂಜ್ಞೆ ಮಾಡಿದರೂ ನಿ[illegible]ಸದೆ ಟ್ರಾಫಿಕ್ ರೂಲ್ಸಿಗೆ ವಿರೋಧವಾಗಿ ನಡೆದ ಕಾರಣ ಅ[illegible]ರಿಗೆ ಅಲ್ಲಿನ ಮೂರನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅಧಿ[illegible]ಣೆ ಜುಲ್ಮಾನೆ ವಿಧಿಸಿರುವರು.

ಸೋನಾಮುಖಿ ಗ್ರಾಮದಲ್ಲಿ ೬೮ ವರ್ಷ ಪ್ರಾಯದ ಒಬ್ಬ ಹೆಂಗಸಿದ್ದಾಳೆ. ೫೬ ವರ್ಷಗಳಿಂದ ಈಕೆಗೆ ಸಾಲಿ[illegible]ದ್ದಾರವಾಗಿ ಉಪವಾಸ. ಈಕೆ ಪ್ರತಿನಿತ್ಯ ಒಂದೆರಡು ತ[illegible]ಸಿ ದಳವನ್ನು ಮೊತ್ತ ತಿನ್ನುತ್ತಾಳೆ. ಈಕೆ ನೀರು ಮುಟ್ಟು[illegible]ದಿಲ್ಲ. ಹಿಂದೂ ಮಹಿಳೆಯ ಈ ವಿಚಿತ್ರ ಸಾಮರ್ಥ್ಯದ [illegible]ದರ್ಶನವನ್ನು ಅಮೇರಿಕದಲ್ಲಿ ಮಾಡಿಸಬೇಕೆಂದು ಅಮೇರಿ[illegible] ಸ್ವಾವಿೂ ಯೋಗಾನಂದ ಗಿರಿಗಳು ಪ್ರಯತ್ನಿಸುತ್ತಿದ್ದಾರೆ.

ವಿವಿಧ ಯಂತ್ರಗಳ ಮೂಲಕವಾಗಲೀ ಹಸಿಗು[illegible] ಮೂಲಕವಾಗಲೀ ಆಫ್ರಿಕಾದಿಂದ 'ಎಲ್ಲೋ ಫೀವರ್' ಎಂ[illegible] ಒಂದು ವಿಧವಾದ ಜ್ವರದ ಸೊಂಕು ಹಿಂದೂಸ್ಥಾನಕ್ಕೆ ವ[illegible] ಪಿಸದಂತೆ ನೋಡಿಕೊಳ್ಳಲು ಕರಾಚಿಯಲ್ಲಿರುವ ವಿವಿಧ [illegible]ಲ್ಲಣಗಳಲ್ಲಿಯೂ ಬೊಂಬಾಯಿನ ಬಂದರಿನಲ್ಲಿಯೂ ಇ[illegible] ಯೂ ಸರ್ಕಾರದವರು ವಿಶೇಷ ರೀತಿಯ ಏರ್ಪಾಡುಗಳ[illegible] ಮಾಡಿರುತ್ತಾರೆ. ಈ ಸೊಂಕು ಇಂಡಿಯಾ ದೇಶಕ್ಕೆ ವಾ[illegible] ಸಿದಲ್ಲಿ ವಿಶೇಷ ಹಾವಳಿಯಾಗುತ್ತದೆಂದೂ, ಈ 'ಎಲ್ಲೋ ಫೀ[illegible]ವರ್' ಎಂಬ ಜ್ವರವನ್ನು ಹರಡುವ ಸೊಳ್ಳೆಗಳು ನಮ್ಮ ದೇ[illegible]ಲ್ಲಿ ವಿಶೇಷವಾಗಿವೆಯೆಂದೂ ಹೇಳಲಾಗಿದೆ.

ತಿರುಚಾಂಗೋಡಿನಲ್ಲಿ ನೀರಿನ ಕ್ಷಾಮವು ಪ್ರಾಸ್ಥವಾಗಿ [illegible]ಜೆಗಳು ಒಂದು ಕೊಡ ನೀರಿಗೆ ಆರು ಕಾಸು ಕೊಟ್ಟು ಕೊ[illegible]ಡುಕೊಳ್ಳುತ್ತಿದ್ದಾರೆಂದೂ. ಕುಂದಾಯದಾರರು ಪಂಚಾಯ[illegible] ಬೋರ್ಡಿನವರು ನೀರಿನ ಅನುಕೂಲ ಒದಗಿಸಿಕೊಡಬೇಕೆ[illegible] ಪ್ರಾರ್ಥಿಸುತ್ತಿರುವುದಾಗಿಯೂ ಹೇಳಲಾಗಿದೆ. ನಾಗರ[illegible]ಯಲ್ ಮುನ್ಸಿಪಾಲಿಟಿಯವರು ವೋಟಾರ್ ಲಾರಿಗಳಲ್ಲಿ [illegible]ರನ್ನು ತಂದು ಕೊಡ ಒಂದಕ್ಕೆ 2 ಕಾಸಿನಂತೆ ಜನರಿಗೆ ವಿ[illegible]ತ್ತಿದ್ದಾರೆಂದು ಪ್ರಕಟವಾಗಿದೆ. ಪರಲಕಿಮಿಡಿ ಮತ್ತು ಚಿಕ[illegible]ಲಿ ತಾಲೂಕುಗಳಲ್ಲಿ ಒಂದು ಕೊಡ ನೀರಿಗೆ ಒಂದಾಣೆ[illegible]ರೂ ಸಿಕ್ಕುವುದು ಕಷ್ಟವಾಗಿದೆಯೆಂದು ತಿಳಿಯುವುದು.

ರಹದಾರಿ ಪಡೆಯದೆ ಮದ್ಯ ಪದಾರ್ಥಗಳನ್ನು ಹೆ[illegible]ರು ಒಂದೂರಿಂದ ಮತ್ತೊಂದೂರಿಗೆ ಸಾಗಿಸುತ್ತಿರುವುದ[illegible]ನೇಕ ಸಂದರ್ಭಗಳಲ್ಲಿ ಪುರುಷ ಕಾನ್‌ಸ್ಟೇಬಲುಗಳಿಗೆ ಗೌ[illegible]ರವಾಗದೇ ಹೋಗುತ್ತಿದೆಯೆಂದೂ, ಅಂಥವರನ್ನು ಪತ್ತೆ[illegible]ಡಿ ಶಿಕ್ಷೆಗೆ ಗುರಿಪಡಿಸಲು ಹೆಂಗಸರೇ ಸಮರ್ಥರೆಂದೂ [illegible]ವಿವಿಧ್ಯ ಪ್ರಾಂತ್ಯಗಳ ಸರ್ಕಾರದವರು ಎಕ್ಸೈಜ್ ಇ[illegible]ಯಲ್ಲಿ ಆರು ಮಂದಿ ಹೆಂಗಸರನ್ನು ಕಾನ್‌ಸ್ಟೇಬಲುಗ[illegible]ನೇಮಿಸಿಕೊಂಡಿರುತ್ತಾರೆ. ಆ ಹೆಂಗಸು ಕಾನ್‌ಸ್ಟೇಬ[illegible]ನ್ನು ಮುಖ್ಯ ಮುಖ್ಯವಾದ ರೈಲ್ವೆ ಸ್ಟೇಷನ್‌ಗಳಲ್ಲೂ [illegible]ಲ್ಕಂಡ ಆಕೃತ್ಯಗಳು ವಿಶೇಷವಾಗಿ ನಡೆಯಬಹುದೆಂದು [illegible]ರಬರುವ ಕಡೆಗಳಲ್ಲೂ ನೇಮಕಮಾಡಿರುತ್ತಾರೆ. ಈ [illegible]ಏರ್ಪಾಡುಗಳು ಪ್ರಯೋಜನಕರವಾಗಿ ತೋರಿಬಂದ[illegible] ಕಾನ್‌ಸ್ಟೇಬಲುಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸುತ್ತಾ[illegible] ಹೇಳಲಾಗಿದೆ.

ವಿದೇಶ.

ವಿ. ಥಾಮಸರ ರಾಜೀನಾಮೆಯಿಂದ[illegible]ದಲ್ಲಿ ಬದಲಾವಣೆಗಳಾಗಲಿವೆ. ಥಾವ[illegible]ಸ್ಯಾಮುವೆಲ್ ಹೋರಡು ಬಕಬಹ[illegible]ರಿಗಿದು ಒಂದು ಬಳ್ಳೀ ಸುಸಂದರ್ಭ.

ಇಂಡಿಯದ ಸಿವಿಲ್ ಸರ್ವೀಸಿ[illegible]ವಿದ್ಯಾರ್ಥಿಗಳ ಸಂಖ್ಯೆ ಕಳೆದ [illegible]ಳ್ಳಿದೆ. ಏನು ಮಾಡೋಣ?

ವ್ಯಾಲಸ್ಟ್ಯಾನಿನಲ್ಲಿ ಯಹೋದ್ಯರಿಗೂ, ಅರಬಿಯರಿಗೂ ಮನಸ್ತಾಪವು ಪ್ರಬಲಿಸಿ, ಖೂನಿಗಳಾಗಿ ಗಲಾಟೆ ಎದ್ದಿದೆ. ವ್ಯಾಲಸ್ಟೈನಿನ ಹಲವು ನಗರಗಳಲ್ಲಿ ಗುಂಡಿನ ಹಾರಾಟ ನಡೆದಿದೆ. ಜಾಫದ ಪೊಲೀಸ್ ಸ್ಟೇಶನಿನ ಮೇಲೆ ಬಾಂಬುಗಳು. ವ್ಯಾಲಸ್ಟೈನಿನ ಕೆಲವು ಕಡೆಗಳಲ್ಲೆಲ್ಲಾ 'ಕರ್ಫ್ಯೂ' ಕಾನೂನು ಜಾರಿಗೆ ಬಂದಿದೆ.

ಆಸ್ಟ್ರಿಯಾ ದೇಶದ ಹೊಸ ಮಂತ್ರಿ ಮಂಡಲವು ಆಸ್ಟ್ರಿಯಾ-ಹಂಗೇರಿ-ಇಟಲಿ ಈ ರಾಜ್ಯಗಳು ಏರ್ಪಡಿಸಿಕೊಂಡಿರುವ ಒಪ್ಪಂದಗಳಿಗೆ ಬೆಂಬಲಕೊಡತಕ್ಕದ್ದಾಗಿದೆ. ಎಂಬ ಭಾವನೆಯಿಂದ ಆಸ್ಟ್ರಿಯಾ ದೇಶದ ಛಾನ್ಸೆಲರಾದ ಡಾ. ಕಾರ್ಲ್‌ಸ್ಪಿಂಗರವರು ಸೀನ್ಯಾರ್ ಮುಸೋಲಿನಿಗೆ ತಂತಿ ಸಮಾಚಾರ ಕಳುಹಿಸಿದ್ದರು. ಸೀನ್ಯಾರ್ ಮುಸೋಲಿನಿಯವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಹೊಸ ಮಂತ್ರಿಮಂಡಲದ ಕಾರ್ಯಕ್ರಮಗಳು ಸುಲಲಿತವಾಗಿ ಜರುಗಲೆಂದು ಹಾರೈಸಿರುತ್ತಾರೆ.

ಮಿ. ಜಿ. ಹೆಚ್. ಥೋಮಸ್‌ರವರು ತಮ್ಮ ಕೊಲೊನಿಯಲ್ ಸೆಕ್ರೆಟರಿಷಿಪ್ಪಿಗೆ ರಾಜೀನಾಮೆ ಬರೆದೊಪ್ಪಿಸಿದರು. ಬ್ರಿಟಿಷ್ ಒಡ್ಡಿಟಿನ ಕೆಲವು ಅಂಶಗಳು ಕಾಲಕ್ಕೆ ಮೊದಲೇ ಹೊರಬಿದ್ದಿತ್ತೆಂಬುದೂ, ಸ್ವಾಕ್ ಬ್ಯೂಕೆಂಗಿನ ವ್ಯವಹಾರದಲ್ಲಿದ್ದ ಇವರ ಮಗನ ದೆಸೆಯಿಂದ, ಈ ಗುಟ್ಟು ರಟ್ಟಾದ ಸಂಗತಿಯಲ್ಲಿ ಮಿ. ಥಾಮಸರ ಹೆಸರು ಕೆಡುವಂತಾಯಿತೆಂಬುದೂ ಈ ರಾಜೀನಾಮೆಗೆ ಕಾರಣವೆಂದು ಊಹನೆ. ಅಂತೂ ಈ ರಾಜೀನಾಮೆಯು ಅನಿವಾರ್ಯಹಸಕ್ಕದ್ದಾದರೂ ಸಮುಚಿತವೆಂದು ಹಲವರ ಅಭಿಪ್ರಾಯ

ಮಿ. ಜೇವ್ಸ್ ವೇಕೀನ್ ಮೂರ್ಹಲ್ ಮತ್ತು ಮಿ. ಆರ್ಚಿಬಾಲ್ಡ್ ಮೂರ್ಹಲ್ ಎಂಬಿಬ್ಬರೂ ಅವಳಿಜವಳಿಯಾಗಿ ಹುಟ್ಟಿದ ಸಹೋದರರು. ಇಬ್ಬರಿಗೂ 63 ವರ್ಷ ವಯಸ್ಸು. ಜೇಮ್ಸ್ ಎಂಬವನು ಭಾರಿ ಜಮೀನ್‌ದಾರ. ಸರ್ರೆಯ ಲೇಗ್‌ಫೀಲ್ಡ್ ಎಂಬ ಗ್ರಾಮದ ಬಳಿ ಡಾರ್ಮನ್ಸ್ ಲ್ಯಾಂಡ್ ಎಂಬಲ್ಲಿ ವಾಸಮಾಡುತ್ತಿದ್ದನು. ಆರ್ಚಿಬಾಲ್ಡ್ ಸಸೆಕ್ಸಿನ ಬ್ರಿಡ್ ಎಂಬಲ್ಲಿ ಉದ್ಯೋಗನಿರತನಾಗಿದ್ದನು. ಹದಿನೈದು ದಿನಗಳ ಕೆಳಗೆ ಜೇಮ್ಸಿಗೆ ದೇಹಾಲಸ್ಯವಾಯಿತು. ಆತನು ಚಿಕಿತ್ಸೆಗಾಗಿ ಲಂಡನ್ ಪಟ್ಟಣಕ್ಕೆ ಹೋದನು. ಆರ್ಚಿಬಾಲ್ಡ್‌ನ ನಗೂ ದೇಹಾಲಸ್ಯವಾಗಿದೆಯೆಂದು ಅಣ್ಣನಿಗೆ ಕಾಗದ ಬರೆದನು ಇಬ್ಬರೂ ಒಂದೇ ದಿನ ಅಸ್ವಸ್ಥರಾದರೆಂದು ಹೇಳಲಾಗಿದೆ. ಒಂದು ವಾರದ ನಂತರ ಇಬ್ಬರ ಕಾಯಿಲೆಯೂ ಒಲವಾಗಿ ಇಬ್ಬರಿಗೂ ಜ್ಞಾನತಪ್ಪಿತು. ಕಳೆದ ಏಪ್ರಿಲ್ ತಾ. 15 ನೇ ಬುಧವಾರ ಆರ್ಚಿಬಾಲ್ಡ್ ಎಂಬವನು ತೀರಿಹೋದನು ಮರುದಿನ ಜೇಮ್ಸನು ತೀರಿಹೋದನೆಂದು ಹೇಳಲಾಗಿದೆ.

[illegible] ಎಬ್ಬಿಯಾವೆಲ್ಲೋ.

[illegible] ಸೈಡ್.

ಗೀತಾಂಜಲಿ ಬಂಗ್ಲೆ.

(ಪೋಸ್ಟ್ ಫೀಸು ಎದುರುಗಡೆ.)

ಈ ತಾ. 15 ರಂದು ಬರುವ ಜನವರಿ ತಾರೀಕಿನ [illegible] ಗೆ ಇದು ಊರಿಗೆ ಬೀಗುವ ಕಾರಣ ಅವರ ಆಸ್ಪತ್ರೆಯನ್ನು ವಜ್ರುತ್ತಾರಾಗಿ ತಿಳಿಸುತ್ತಾರೆ.

ಅಬಿಸೀನಿಯೊದ ವಾರ್ತೆ.

ಇಂಗ್ಲೆಂಡಿಗೆ ಇಟಲಿಯ ಅಭಯ.

ಇಂಗ್ಲೆಂಡಿನ ಮೇಲೆ ಯಾವ ಬಗೆಯ ಆಕಸ್ಮಿಕಮಣದ ಯೋಜನೆಯು ಇಟಲಿಯವರಿಗಿರುವುದಿಲ್ಲವೆಂದು ಲಂಡನ್ನಿನಲ್ಲಿರುವ ಇಟಲಿಯ ರಾಯಭಾರಿಗಳು ತಿಳಿಸಿರುವರು.

ಮೂರ್ಹಲ್ ಬೊಡೋಗ್ಲಿಯೋರವರು.

ಒಹಿಷ್ಕಾರ ಯೋಜನೆಯಿಂದುಂಟಾಗಬಹುದಾದ ಪರಿಣಾಮಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಇತೆ ರಪಿಯುದ ಈಗಿನ ಇಟಲಿ ವೈಸರಾಯಿಯಾಗಿರುವ ಮೂರ್ಹಲ್ ಬೊಡೋಗ್ಲಿಯೋರವರು ರಜೆಯಲ್ಲಿ ಇಟಲಿಗೆ ಹಿಂತಿರುಗಿರುವರು. ಮುಸೊಲಿನಿ ಮಂತ್ರಿ ಇವರೊಡನೆ ಈ ವಿಚಾರ ಅಭಿಸಾಕ್ಯಯ ಪಡಿಸಿದನು.

ಇತೋಪಿ ಓದಲ್ಲಿ ಪರ ರಾಷ್ಟ್ರ ಸೈನ್ಯಗಳು.

ಅತೋಪಿ ಯುದ್ಧಲ್ಲಿನುತ ಪರ ರಾಷ್ಟ್ರಗಳು ತಮ್ಮ ರಾಯಭಾರಿ ಕಚೇರಿಗಳ ರಕ್ಷಣಾರ್ಥವಾಗಿ ಸ್ವಲ್ಪ ಸೈನಿಕರನ್ನು ಇಟ್ಟುಕೊಂಡಿದ್ದಾರೆ. ಈ ಅಂಥಾ ಸೈನ್ಯಗಳನ್ನು ಹಿಂತೆಗೆದುಕೊಳ್ಳಬೇಕೆಂದು ಇಟಲಿ ಸರ್ಕಾರವು ಸೂಚಿಸಿರುವದು.

ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳನ್ನು ಹಿಂತೆಗೆಯವುದಿಲ್ಲ.

ಈ ಸೂಚನೆಯು ಸ್ವೀಕಾರ ಬ್ರಿಟಿಷರೂ ಮತ್ತು ಫ್ರೆಂಚರೂ ತಮ್ಮ ತಮ್ಮ ಕಚೇರಿಗಳಿಂದ ಸೈನ್ಯಗಳನ್ನು ಹಿಂತೆಗೆಯಲು ಒಪ್ಪುವುದಿಲ್ಲವೆಂದು ಉತ್ತರವಿತ್ತಿರುವರು

ಇಟಲಿ ನಾಣ್ಯವು ಚಲಾವಣೆಗೆ ತರಲ್ಪಟ್ಟಿಲ್ಲ.

ಅಬಿಸೀನಿಯಾದಲ್ಲಿ ಚಲಾವಣೆಯಲ್ಲಿದ್ದ ತೆಲರ್ (ಈಗ ಇಟಲಿಯ ನಾಣ್ಯವಾದ 'ಲಿರ'ನ ಆರನೆಯ) ಎಂಬ ನಾಣ್ಯದ ಬದಲು ಇಟಲಿಯ ನಾಣ್ಯವಾದ 'ಲಿರ'ನ್ನು ಚಲಾವಣೆಗೆ ತಂದಿರಲಿಲ್ಲ. ಬ್ಯಾಂಕ್ ಆಫ್ ಇತೆಯೋಪಿಯವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಕೆಲಸಮಾಡಿ ಇಟ್ಟಿದ್ದವರಿಗೆ ಅದರ ಬೆಲೆಯಷ್ಟು ಇಟಲಿ ನಾಣ್ಯವನ್ನು ಕೊಡುತ್ತಲಿರುವರು. ಇತೋಪಿಯ ಬ್ಯಾಂಕನ್ನು ಬೇಗನೆ ವಶಕ್ಕೆ ಇಟಲಿ ಬ್ಯಾಂಕನ್ನು ತೆರೆಯಲಿರುವರು.

ಇಟಲಿಯ ಆಕ್ರಮಣದಿಂದ ವ್ಯಾಪಾರಿಗಳಿಗೆ ಲಾಭ

ಯುದ್ಧದ ದೆಸೆಯಿಂದಲೂ ಮತ್ತು ಇಟಲಿಯ ನಾಣ್ಯದ ಚಲಾವಣೆಯ ದೆಸೆಯಿಂದಲೂ ಎಲ್ಲಾ ಸಾಮಗ್ರಿಗಳಿಗೆ ಬೆಲೆಯು ಎರಡರಷ್ಟು ಮೂರರಷ್ಟು ಏರಿದೆ. ವ್ಯಾಪಾರಿಗಳು ಈಗ ಅಪಾರವಾದ ಲಾಭ ಸಂಪಾದಿಸುತ್ತಲಿರುವರು.

ಲೂಟಿಗಾರರಿಗೆ ಗುಂಡು.

ರಾಜಧಾನಿಯಲ್ಲಿ ದರೋಡೆ ಮಾಡುವವರನ್ನು ಗುಂಡಿಕ್ಕಿ ಅಲ್ಲೇ ಕೊಲ್ಲುತ್ತಿರುವರು. ಈ ವರೆಗೆ ಸುಮಾರು 53 ಮಂದಿಯನ್ನು ಈ ಕಾರಣದಿಂದ ಗುಂಡು ಹೊಡೆದು ಕೊಲ್ಲಲಾಗಿದೆ.

ಅಬಿಸೀನಿಯಾ ಚಕ್ರವರ್ತಿಗಳು ಇಂಗ್ಲೆಂಡಿಗೆ.

ಅಬಿಸೀನಿಯಾ ಚಕ್ರವರ್ತಿಗಳು ತಮ್ಮ ಇಬ್ಬರು ಪುತ್ರರು ಪುತ್ರಿ ಮತ್ತು ಪ್ರೈವೇಟ್ ಸೆಕ್ರೆಟರಿಯವರೊಡನೆ ಇಂಗ್ಲೆಂಡಿಗೆ ಹೊಂಟಿರುವರು. ಅವರು ಇಂಗ್ಲೆಂಡಿನಲ್ಲಿ ಗುಪ್ತವಾಗಿ ಸಂಚಾರ ಮಾಡಲಿರುವರೆಂದು ಹೇಳಲಾಗಿದೆ.

ಫ್ರೆಂಚರಿಗೂ ಅಭಯವನ್ನಿತ್ತಿರುವರು.

ಇಟಲಿಯವರ ಆಕ್ರಮಣದಿಂದ ಫ್ರೆಂಚರ ಡ್ಜಿಬೌತಿಯಲ್ಲಿನ ವ್ಯಾಪಾರಕ್ಕೆ ಪೆಟ್ಟು ತಗಲಬಹುದೆಂಬ ಸಂಶಯವು ಫ್ರೆಂಚ್ ಪತ್ರಿಕೆಗಳಲ್ಲಿ ಬಹಳವಾಗಿತ್ತು. ಅದಕ್ಕೆ ಇಟಲಿಯವರು ಭರವಸೆಯನ್ನಿತ್ತು ವ್ಯಾಪಾರ ಸಂಬಂಧವಾದ ಯಾವುದೇ ಕಾರ್ಯಕ್ರಮವನ್ನು ಫ್ರೆಂಚರ ಅಭಿಪ್ರಾಯ ತೆಗೆಯದೆ ಜಾರಿಗೆ ತರುವುದಿಲ್ಲವೆಂದೂ ಭರವಸೆಯನ್ನಿತ್ತಿರುವರು.

"ಪತ್ತು ಫೆಂಗಿಯೊಳಗೆ ನನ್ನ ವಸ್ತ್ರಯೋಗೆಯುವ ಕೆಲಸಗಳೆಲ್ಲವೂ ಪೂರೈಸಿದವು. 501 ಮೂರ್ಕಿನ ಸಾಬೂನಿಗೆ ನನ್ನ ಅಭಿನಂದನೆ."

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಿಮೆ!

ಟಾಮ್‌ಕೋ ಮೂರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—52. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲಾ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠಯನ್ನು ಪಡೆದ ಡಾ. ಕ[illegible] ನಾರಾಯಣ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅ[illegible] ಎಕಾಂಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

ndrographis niculate
riberies Aristata
lvulas Alsinoides
litum Heterophylum
2 Coccul[illegible] ordifolius
4 Vernonis Cinerarea
6 Dashm[illegible]ola

ಇದಕ್ಕೆ ಅತ್ಯುತ್ತಮ ಔಷಧಿ. ಕ್ವಿನೈನನ್ನು ಯಾವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಮಹಾ ಹಾನಿಗಳ ಭಯವೇ ಇಲ್ಲ.

ತಯಾರಿಸುವವರು:—
ಪೋ.
—ಎಸ್. ಮೂರ್ತಿ

ಇಂದೇ ಆರಂಭಿಸಿರಿ!
ಸುಪ್ರಸಿದ್ಧ
ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
[illegible] ಲೆತೆಯ ಏಣಿಯನ್ನೇರಿರಿ. ಲೋಕ[illegible]

ರಾಷ್ಟ್ರಸಭಾಪತಿಗಳು ಬೊಂಬಾಯಿಯಲ್ಲಿ

(3ನೇ ಪುಟದಿಂದ ಸಾಗಿದ್ದು)

ಅದಕ ಕಾಲ, ಅವಶ್ಯಕತೆ ಮಂಗಿದುಹೋಗಿದೆ. ಅದರ ಸ್ಥಾನವನ್ನು ಸಮಿತಾವಾದವು ಅಕ್ರಮಿಸಬೇಕಾಗಿದೆ. ಭಂಡವಾಳತನಕ್ಕೆ ಸ್ವಾಭಾವಿಕವಾದ ಗಶ್ಯಂಕರವೇ ಸಮಿತಾವಾದ ಅಷ್ಟೆ; ಇದು ಕೇವಲ ಕಾಲ ನಿಯಮ.

ವಿದ್ಯಾರ್ಥಿಗಳಿಗೆ ಬೋಧನೆ

ವಿದ್ಯಾರ್ಥಿಗಳೂ ಪಂಡಿತರನ್ನು ಸತ್ಕರಿಸಿ, ಅವರ ಉಪದೇಶ ಸುಧೆಯನ್ನು ನೀಡುವಂತೆ ಬೇಡಿದರು. ಪಂಡಿತರು ಅದನ್ನು ಮನ್ನಿಸಿದರು.

'ನೀವು ವಿದ್ಯಾರ್ಥಿಗಳು. ವಿದ್ಯಾಭ್ಯಸನದಲ್ಲಿ ಹೊರ ಪ್ರಪಂಚವನ್ನು ಮರೆಯಬೇಡಿ. ಪ್ರಚಂಡ ಶಕ್ತಿಗಳು ತಾಂಡವವಾಡುತ್ತ, ಹೋರಾಡುತ್ತ ಪ್ರಪಂಚವನ್ನೆ ಉರ್ಧುರೀಭೂತವನ್ನಾಗಿ ಮಾಡುತ್ತಿವೆ ಚರಿತ್ರೆಯನ್ನೋದಿ. ಅವರ ಅಂತರ್ಗತ ಮರ್ಮವನ್ನು ಭೇದಿಸಿ. ಸ್ವಾತಂತ್ರ್ಯ ಸಂಪಾದನೆಯ ಫಲವು ಹೇಗೆ ಮಾನವ ಕೋಟಿಯನ್ನು ಸವರಿಸುತ್ತಿದೆ ನೋಡಿ. ಸ್ವಾತಂತ್ರ್ಯ ಭಾವನೆಗೂ ಒಂಡವಾಳಗಾರನ ಇರುವಿಕೆಗೂ ಎಷ್ಟು ಅಜಾಗಜಾಂತರ ನೋಡಿ. ನೋಡಿ, ಹೇಗೆ ಕಾಲ ಧರ್ಮವು ಒದಲಾಯಿಸುತ್ತಿದೆ. ಅದರ ಮರ್ಮವನ್ನು ಅರಿಯಿರಿ. ನಿಮ್ಮ ಜೀವಿತವನ್ನು ತಿದ್ದಿಕೊಂಡು ಆ ಕಾಲ ಧರ್ಮಕ್ಕೊಡನೆ ಹೊಂದಿಕೊಳ್ಳಿ. ವ್ಯರ್ಥಜೀವಿಗಳಾಗಬೇಡಿ. ಚೈತನ್ಯ ಗಳಿಸಿ ಶಕ್ತಿಗಳಿಸಿ, ಸ್ವಾತಂತ್ರ್ಯಗಳಿಸಿ.''

ಪ್ರೇಮ ವಿದ್ಯಾ ಪೀಠ.

ತುಂಗಭದ್ರಾ (ಬಳ್ಳಾರಿ ಜಿಲ್ಲ)

ಇದರ ಹೊಸ ವರ್ಷವು ನಾಳೆ ಜುಲೈಯಲ್ಲಿ ಮೊದಲಾಗುತ್ತದೆ ವಯಸ್ಸಿದೆಯು ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕಂಡರ್, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ವಾಸ್ ಆದವರಿಗೂ ಯೋಗ್ಯತೆಗೆ ತಕ್ಕಂತೆ ವಿಧವಿಧವಾದ ಕೋರ್ಸ್‌ಗಳಿವೆ. ಪ್ರೊಸ್ಪೆಕ್ಟಸ್ ಮೂಹಿತಿಗಾಗಿ ಕೂಡಲೆ 2 ಆಣೆ ಸಲ್ಯೂಪ್ ಇಟ್ಟು ಬರೆಯಿರಿ.

ಮುಖ್ಯೋಪಾಧ್ಯಾಯರು ಡಾ. ಸುಮತಿಬಾಯಿ,
ಬಿ. ಎ., ಎಲ್. ಟಿ, ಎಫ್. ಪಿ ಎಸ್. ಎಸ್.,
ಭಿಷಗ್ಭತ್ನ, ರಿಜಿಸ್ಟ್ರಾರ್.

ಮನಸ್ಸಿಗೂ ದೇಹಾರೋಗ್ಯ ಸೌಖ್ಯಗಳಿಗೂ ಇರುವ ಅನ್ಯೋನ್ಯ. ಸಂಬಂಧಗಳು.

ಆರೋಗ್ಯ ಜೀವನಕ್ಕೆ ಧೈರ್ಯೋತ್ಸಾಹದಿಂದ ಕೂಡಿದ ನಿಷ್ಕಲ್ಮಷವಾದ ಮನಸ್ಸು ಅತ್ಯವಶ್ಯವಾದುದು. ದೇಹದ ಆರೋಗ್ಯಾಭಿವೃದ್ಧಿಗೆ ಮನಸ್ಸು ಬಹಳ ಮಟ್ಟಿಗೆ ಸಹಕಾರಿಯಾಗಿದೆಯೆಂಬುದು ಬಹುಕಾಲದಿಂದ ಎಲ್ಲರಿಗೂ ತಿಳಿದ ವಿಷಯವೇ ! ಸಂತೋಷಚಿತ್ತದಿಂದ ಕೂಡಿದವರು ಆರೋಗ್ಯಶಾಲಿಗಳಾಗಿಯೂ, ಸುಖವಾಗಿಯೂ ಬಾಳುವರು. ಮನಸ್ಸಿನಲ್ಲಿ ಚಿಂತೆಯೂ, ಆಯಾಸವೂ ಅಧಿಕವಾದರೆ, ದೇಹದಲ್ಲಿ ರೋಗ ನಿರೋಧಕಶಕ್ತಿಯು ಬಹಳವಾಗಿ ಕಡಿಮೆಯಾಗುವುದು. ಹೀಗಾಗಿ ಮನೋವ್ಯಥೆ, ಆಲೋಚನೆ, ಮತ್ತು ವ್ಯಸನಗಳಿಂದ ಕೂಡಿರುವವರು ಬಹಳ ಜಾಗ್ರತೆಯಾಗಿ ರೋಗಗಳಿಗೆ ಗುರಿಯಾಗುವರು. ಆದುದರಿಂದ ಮನಸ್ಸು, ಅದರಲ್ಲಿ ಹುಟ್ಟುವ ಆಲೋಚನೆಗಳೂ, ನಿಷ್ಕಲ್ಮಷವಾಗಿಯೂ, ಸಂತೋಷವಿಶಿಷ್ಟವಾಗಿಯೂ ಇರುವಂತೆ ನೋಡಿಕೊಳ್ಳಬೇಕು. ಮನುಷ್ಯನ ಜೀವನದಲ್ಲಿ ಚಿಂತೆ, ಖೇದ, ಮುಂತಾದುವು ಯಾರಿಗೂ ತಪ್ಪಿದುದಲ್ಲ. ಪ್ರಪಂಚದಲ್ಲಿ ಕಷ್ಟಸುಖಗಳು ಎಲ್ಲಾ ಕಡೆಯೂ ವಿಳಿತವಾಗಿ ಇರುವುವು ಅಷ್ಟೈಶ್ವರ್ಯಸಮೃದ್ಧಿಯಿದ್ದರೂ, ದಾರಿದ್ರ್ಯವಿದ್ದರೂ, ಅವರಿಗೆ ಯಾವುದೋ ಒಂದು ವಿಧದಲ್ಲಿ ಚಿಂತೆ, ವ್ಯಸನ ಮುಂತಾದ ಬಾಧೆಗಳಿದ್ದೇ ಇರುವುವು ದರಿದ್ರಸ್ಥಿತಿಯಲ್ಲಿರುವವರಿಗಾದರೋ ಕ್ಷಣ ಮಾತ್ರವೂ ನೆಮ್ಮದಿಯಿಲ್ಲ. ಆದರೆ, ಯಾವಾಗಲೂ ಅವುಗಳನ್ನೇ ನೆನೆಸುತ್ತಿದ್ದರೆ, ದೇಹಾರೋಗ್ಯವು ಕೆಡುವುದು, ಆದುದರಿಂದ, ಸಾಧ್ಯವಾದಮಟ್ಟಿಗೆ ಆ ಬಾಧೆಗಳು ಮನಸ್ಸಿಗೆ ಶಟ್ಟದಂತೆ ನೋಡಿಕೊಳ್ಳಬೇಕು. ಜೀವನ ಸಮಸ್ಯೆಗಳನ್ನು ಸುತೋಷಚಿತ್ತದಿಂದಲೇ ನಿರ್ವಹಿಸಿಕೊಂಡು ಹೋಗಬೇಕು. ದುಃಖಗಳನ್ನನುಭವಿಸದೆ ಜೀವನಪಥವನ್ನು ನಡೆಯುವುದು ಯಾರಿಗೂ ಸಾಧ್ಯವಿಲ್ಲ ನಮ್ಮ ಮನಸ್ಸಿನ ಚಿಂತೆಯು ಕ್ಷಣಿಕವಾದಲ್ಲಿ ಹೇಗೆ ನಿವೃತ್ತಿಯಾಗುವುದೋ, ಹಾಗೆಯೇ ಸಂತೋಷವೂ ಕ್ಷಣಿಕವೇ !

ಐಶ್ವರ್ಯವೂ ಅಧಿಕಾರವೂ ಇದ್ದವರಿಗೆಲ್ಲಾ ಎಲ್ಲಾ ಸುಖವೂ ಲಭಿಸುವಂತಾಗಲಿಲ್ಲ. ಶರೀರಶಾಸ್ತ್ರವನ್ನು ಅಭ್ಯಾಸಗೆ ತಂದುಕೊಳ್ಳುತ್ತಿರುವುದೇ ಸಕಲ ಕಾರ್ಯಗಳಲ್ಲಿ ಜಯಪ್ರಾಪ್ತಿ, ಸುಖಸಂತೋಷಗಳಿಗೂ ತಳಹದಿ. ನಿಮ್ಮ ಜೀವನವನ್ನು ಒಳ್ಳೆಯವಾಗಿಯೂ, ಉತ್ಕೃಷ್ಟವಾಗಿಯೂ, ಸೇವಾಪರವಾಗಿಯೂ ಇರಲಿ, ನಿಮ್ಮ ಆತ್ಮ ಶರೀರ, ಮತ್ತು ನಿಮ್ಮ ಜೀವವೂನವೂ ಸಕಲ ಸುಖಸಂಪತ್ತುಗಳನ್ನು ಅನುಭವಿಸಲು ಅವಕಾಶವನ್ನು ಕಲ್ಪಿಸಿಕೊಡುವುವು.

ಸಾಮಾನ್ಯವಾಗಿ ಎಲ್ಲರೂ ಅಪೇಕ್ಷಿಸುವುದೇನು ? ಬರೀ ಅರಮನೆಯೂ ಅಲ್ಲ ! ಐಶ್ವರ್ಯ ಸಮೃದ್ಧಿಯೂ ಅಲ್ಲ ! ಪ್ರಪಂಚದಲ್ಲಿ ಜೀವಿಸಿರುವವರೆಗೂ ತಾವು ತ್ರಿಕರಣಶುದ್ಧಿಯಿಂದ ಸದಾಚಾರ ಸಂಪನ್ನರಾಗಿ, ಸೌಖ್ಯದಿಂದಿರುವಂತೆ ಭಗವಂತನು ಅನುಗ್ರಹಿಸಲೆಂಬುದೇ ಎಲ್ಲರ ಕೋರಿಕೆಯೂ ಆಗಿರುವುದು. ನಿರ್ಮಲ ಚಿತ್ತವೇ ಜೀವನಕ್ಕೂ, ಸುಖಸಂಪತ್ತುಗಳಿಗೂ ಮೂಲಾಧಾರವು. ಆದುದರಿಂದ ಸದಾಲೋಚನಾಸಂಪನ್ನರಾಗಿರುವವರು ಪ್ರಾಯಶಃ ಸುಖವಾಗಿಯೇ ಬಾಳುವರು. ಸತ್ಯಕ್ಕೆ ಎಂದಿಗೂ ಭಯವಿಲ್ಲ. ದೈವಭೀತಿಯುಳ್ಳವರಿಗೆ ಬೇರೆ ಯಾವುದರ ಭಯವೂ ಇಲ್ಲ.

ಉದಾರವಾದ ಆಲೋಚನೆಗಳು, ಸದಾಚರಣೆ, ಇವು ನಮ್ಮಲ್ಲಿರುವ ಧನವಾಗಿದ್ದಲ್ಲಿ, ಅದರಿಂದ ಆರೋಗ್ಯವನ್ನೂ, ಸುಖಸಂಪತ್ತುಗಳನ್ನೂ ಸುಲಭವಾಗಿ ಕೊಂಡುಕೊಳ್ಳಬಹುದು.

ಅಂತಹ ಅವೋಘವಾದ ನೀತಿಯಿಂದಲೂ, ನಿಷ್ಕಲ್ಮಷವಾದ ಚಿತ್ತದಿಂದಲೂ ಕೂಡಿದ ಆಚರಣೆಗಳಿದ್ದಲ್ಲಿ, ಮನಸ್ಸು ಆನಂದದಿಂದ ಕೂಡಿ, ಆರೋಗ್ಯ ಸುಖ ಸಂಪತ್ತುಗಳನ್ನನುಭವಿಸುವುದು. ನಾವು ಬುದ್ಧಿ ಪೂರ್ವಕವಾಗಿಯಾಗಲಿ, ತಿಳಿಯದೆಯಾಗಲಿ ತಪ್ಪು ಮಾಡಿದಲ್ಲಿ, ಅದಕ್ಕಾಗಿ ಪಶ್ಚಾತ್ತಾಪ ಪಟ್ಟು, ಅಂತಹ ಕಾರ್ಯಗಳನ್ನು ಮುಂದೆ ಯಾವಾಗಲೂ ಮಾಡುವುದಿಲ್ಲವೆಂದು ನಿರ್ಧರಪಡಿಸಿಕೊಳ್ಳಬೇಕು. ಆ ಅಭ್ಯಾಸಗಳಿಂದ ನಮ್ಮ ಜೀವಿತವೇ ಮೂಸಾಡುವುದರಿಂದ, ಆರೋಗ್ಯ ಸುಖ ಸಂಪತ್ತುಗಳಿಗೆ ಅದು ಸಾಧಕವಾಗುವುದು.

ನಿಮ್ಮ ನಿಮ್ಮ ಕಾರ್ಯಗಳಲ್ಲಿಯೂ, ಪ್ರವರ್ತನೆಗಳಲ್ಲಿಯೂ ಸ್ವಾಮಿದ್ರೋಹ, ವಿಶ್ವಾಸಘಾತಕತೆ ಮುಂತಾದುವುಗಳಿಂದ ಶ್ರಮವಿಲ್ಲದೆ ತಪ್ಪಿಸಿಕೊಳ್ಳಬೇಕು. ಇವುಗಳಿಂದ ನಿಮ್ಮ ಕರ್ತವ್ಯಗಳನ್ನು ನೆರವೇರಿಸಿದ ಸಂತೋಷವು ನಿಮ್ಮ ಮನಸ್ಸಿನಲ್ಲಿ ಹುಟ್ಟುವುದು. ಅದರಿಂದ ಆರೋಗ್ಯಶಾಲಿಗಳಾಗಿಯೂ ಸುಖವಾಗಿಯೂ ಬಾಳುವಿರಿ.

ಮನಸ್ಸಿನಲ್ಲಿ ಕಲುಷಗಳಿದ್ದರೆ, ಶರೀರವೂ ಕಲ್ಮಷಯುಕ್ತವಾಗುವುದು. ಸದ್ಗುಣ, ವಿಶ್ವಾಸಘಾತಕತೆ, ಇವುಗಳಿಗೆ ವಿರುದ್ಧವಾದ ತುಚ್ಛವೂ, ಅಲ್ಪವೂ, ಕಲ್ಮಷಯುಕ್ತವೂ ಆದ ಆಲೋಚನೆಗಳನ್ನು ತ್ಯಜಿಸುವುದಕ್ಕೆ ಪ್ರಯತ್ನಿಸಬೇಕು. ಹಣ ಗಳಿಸುವಾಗಲು ಎಲ್ಲರಿಗೂ ಸಾಧ್ಯವಿಲ್ಲ. ಸದಾಚರಣೆ, ಸದ್ಗುಣ, ವಿಶ್ವಾಸಘಾತಕತೆ ಮುಂತಾದ ಭಾಗ್ಯಗಳನ್ನು ಯಾರು ಬೇಕಾದರೂ ಸಂಪಾದಿಸಬಹುದು, ಸದಾಚರಣೆಯಿಲ್ಲದೆ ಐಶ್ವರ್ಯದ ಮುಖೇನಿಂದಲೆ ಸಕಲ ಸಂಪತ್ತುಗಳನ್ನೂ ಅನುಭವಿಸುವವರಿಗಿಂತಲೂ, ಮೇಲೆ ಹೇಳಿರುವ ಸದ್ಗುಣಗಳನ್ನು ಅನುಸರಿಸಿದವರು ಹೆಚ್ಚು ಸುಖ ಸಂತೋಷಗಳನ್ನನುಭವಿಸುವರು.

ಸಂಕ್ಷೇಪವಾಗಿ ಹೇಳುವುದಾದರೆ, ನಿಷ್ಕಲ್ಮಷವಾದ ಚಿತ್ತೈರ್ಯೋತ್ಸಾಹವುಳ್ಳ ಮನಸ್ಸೇ ದೇಹಾರೋಗ್ಯಕ್ಕೆ ಮೂಲಕಾರಣವು

'ರಾ. ಬ.'

ಸಮರ್ಥಕ ಆಡಳಿತದಿಂದ, ಅಡಿಪಿಯಂದ ವ್ಯವಹಾರದಿಂದ, ಶ್ರೇಷ್ಠತಮವಾದ ಅಭಿವೃದ್ಧಿಯಿಂದ
ಭಾರತ ವಿಮಾರಂಗದಲ್ಲಿ ಪ್ರತ್ಯೇಕ ಸ್ಥಾನವನ್ನು ಪಡೆದಿರುವ

ಮೈಸೂರಿನ

ದಿ ಮೈಸೂರ್ ಜನರಲ್ಸ್ ಇನ್ಷೂರೆನ್ಸ್ ಕಂಪನಿ.

ಕನ್ನಡಿಗರ ಹೆಮ್ಮೆಯ ಸ್ವದೇಶೀ ಸಂಸ್ಥೆಯಾದ ಈ ಕಂಪನಿಯ
ತಪ್ಪದೆ ವಿಮೆ ಮಾಡಿಸಿ.

ಮೊದಲಬೇ 5 ವರ್ಷಗಳ ಆಯುಷ್ಯಕ್ಕೆ ಜೀವನದ ಭದ್ರತೆಯಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮಾಪತ್ರದ ಮೇಲೆ,—

ವರ್ಷಕ್ಕೆ 1ಕ್ಕೆ ರೂಪಾಯಿ 10 ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇಕ್ಷಣದಲ್ಲಿ ಇಷ್ಟು ಬೋನಸ್ಸನ್ನು ಹಂಚಿದ ದಿರುವೇ ವಿಮಾಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ
ಏಜೆಂಟರು ಬೇಕು.

ಪ್ರಜಾತಿ

ಕಂಪನಿ

ಕೆರ್ಕಂಪನಿ

ಜ್ವರದ ಗುಳಿಗೆಗಳು.

ಜಾಂಡಿಸ್, ಬಾತುಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52–32) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ

WANTED

Caadidates for Teleg
Master class. Allowance
quarter and passage fre
tial. Rules and entra
eight.

Director, Royal T
ties College, Bomb

ಇಟೆಲಿಯಲ್ಲಿ ಸ್ತ್ರೀಯರು.

ಸ್ತ್ರೀ ಸ್ವಾತಂತ್ರ್ಯ ಕೊಡದ ಇಟ್ಲಿ ಅಬಿಸೀನಿಯೊಕ್ಕೆ ನಾಗರೀಕತೆಯನ್ನು ಕೊಡಲು ಹೋಗಿದೆ.

ಮಹಾ ಯುದ್ಧದ ಅನಂತರ ಪಾಶ್ಚಿಮಾತ್ಯ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿಯ ಹೆಂಗಸರು ತಾವೂ ಸ್ವತಂತ್ರರಾಗಬೇಕೆಂದು ಸರ್ವ ಪ್ರಯತ್ನಗಳನ್ನು ಮಾಡುತ್ತಿರುವರಷ್ಟೆ. ಯೂರೋಪಿನ ಸಕಲ ರಾಷ್ಟ್ರಗಳೂ ಸ್ತ್ರೀಯರಿಗೆ ಸರಿಸಮಾನವಾದ ಹಕ್ಕು ಜಾಧ್ಯತೆಗಳನ್ನು ಒದಗಿಸಿಕೊಟ್ಟಿವೆ. ಆದರೆ ಇಟೆಲಿ ದೇಶವು ಈ ಕಾರಿತು ಇನ್ನೂ ಪುರಾತನ ಯುಗ ಕ್ರಮವನ್ನೇ ಅನುಸರಿಸುತ್ತಿದೆ ಎಂಬ ವಿಷಯವನ್ನು ತಿಳಿಯಲು ಆಶ್ಚರ್ಯಪಡಬೇಕಾಗಿದೆ. ಇಟೆಲಿಯ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ ಇತರ ದೇಶಗಳಲ್ಲಿರುವಂತೆ ಅವರಿಗೆ ಸ್ಥಾನ ಮಾನಗಳಿಲ್ಲ.

ಲಂಡನ್ ನಗರದಲ್ಲಿ ಈಗೀಗ ಸ್ತ್ರೀಯರು ಯೂನಿಯನ್ ಉದ್ಯೋಗಗಳಲ್ಲಿಯೂ ಭಾಗಿಗಳಾಗಲು ತೊಡಗಿದ್ದಾರೆ. ಸರ್ಕಾರಿ ಉದ್ಯೋಗಗಳಿಗೆ ಅವರು ಸೇರಿಕೊಳ್ಳುತ್ತಾರೆ. ಬ್ರಿಟಿಷ್ ರಾಜ್ಯಾಧಿಪತ್ಯದ ಅಡಳಿತವು ಗಂಡಸರಿಂದಲೂ ಹೆಂಗಸರಿಂದಲೂ ಏಕ ಪ್ರಕಾರವಾಗಿ ನಡೆಸಲ್ಪಡಬೇಕೆಂದು ಪ್ರಯತ್ನಗಳು ನಡೆಯುತ್ತಲಿವೆ. ಫೇಸಿಸ್ಟ್ ಪಂಗಡದ ಅಧೀನವಿರುವ ಇಂದಿನ ಇಟೆಲಿ ದೇಶವು ಗಂಡಸರಿಂದಲೇ ಆಳಲ್ಪಡುತ್ತಿದೆಯೆಂದೆನ್ನಬಹುದು. ರಾಜಕೀಯ ವಿಷಯದಲ್ಲಿ ಅಲ್ಲಿಯ ಹೆಂಗಸರಿಗೆ ಯಾವ ಅಧಿಕಾರವೂ ಇರುವುದಿಲ್ಲ. ಅಧಿಕಾರವುಳ್ಳ ಯಾವ ಉದ್ಯೋಗವನ್ನಾಗಲೀ ಮಹಿಳೆಯು ಕೈಕೊಳ್ಳಲು ಅನರ್ಹಳಾಗಿದ್ದಾಳೆ. ಆಕೆಗೆ ಇಹದಲ್ಲಿ ತನ್ನಿಚ್ಛೆಯನ್ನು ನಡೆಸಲು ಸಾಧ್ಯವಿಲ್ಲದಂತಾಗಿದೆ. ತನ್ನ ಸಮೂಹವನ್ನು ಉತ್ತಮ ಸ್ಥಿತಿಗೆ ತರಲು ಓರ್ವ ಸ್ತ್ರೀಯು ಕೆಲಸ ಮಾಡಿದ್ದೇ ಆದರೆ ಸರ್ಕಾರದವರಿಂದ ಆಕೆಗೆ ಕಠಿಣ ಶಿಕ್ಷೆಯು ದೊರೆಯುವುದು. ಇಟೆಲಿಯ ಸ್ತ್ರೀಯರೆಂದರೆ ಗಂಡಸರ ಪತ್ನಿಯರು, ದಾಸಿಯರು ಮಾತ್ರ.

ಫೇಸಿಸ್ಟ್ ಪಂಗಡದವರೆಂದರೆ ಅಮೊಂದು ಗಂಡಸರ ಗುಂಪು. ಹೆಂಗಸಿಗೆ ಅದರೊಳಗೆ ಪ್ರವೇಶವಿಲ್ಲ. ಆಕೆಗೆ ಅದರ ಸದಸ್ಯೆಯಾಗಲು ಅಧಿಕಾರವಿಲ್ಲ. ಆದರೂ ಇಟೆಲಿ ದೇಶದ 300,000 ಕ್ಕಿಂತಲೂ ಅಧಿಕವಾದ ಸ್ತ್ರೀಯರು ತಾವೊಂದು ಹೊಸದಾದ ಫೇಸಿಸ್ಟ್ ಪಂಗಡವನ್ನು ಸ್ಥಾಪಿಸಿರುವರು. ಇವರೆಲ್ಲರೂ ಗಂಡಸರ ಪಂಗಡದ ಅಧೀನದಲ್ಲಿರಬೇಕಾಗಿದೆ ಅಮ ಆಜ್ಞೆಗಳನ್ನು ಅಕ್ಷರಶಃ ಪಾಲಿಸಬೇಕಾಗಿದೆ.

ಪ್ರಕೃತದ ಇತೋಪಿಯದ ಯುದ್ಧದಲ್ಲಿ ಮುಸಲನಿಯವ ತಮ್ಮ ದೇಶದ ಸ್ತ್ರೀಯರಿಗೆ ಅಂದು ಹೊಸ ಉದ್ಯೋಗವನ್ನು ಪಾಲಿಸಿರುವರು. ಹೆಂಗಸರೆಲ್ಲರೂ ಇಟೆಲಿಯ ಪ್ರದ ಅತ್ಯಾವಶ್ಯಕತೆಯ ಕಾರಿತು ಜನರಿಗೆ ಬೋಧಿಸಬೇಕು. ಸಿನ ಮಹಾ ಯುದ್ಧದಲ್ಲಿ ತಮ್ಮ ಗಂಡಂದಿರನ್ನು ಕಳೆದುಕೊಂಡ ಇಟೆಲಿ ದೇಶದ ವಿಧವೆಯರು 64 ಪಂಗಡಗಳಾಗಿ ವಿಭಾಗವಾಗಿ ಜನರಿಗೆ ಯುದ್ಧದಲ್ಲಿ ಹೆಚ್ಚು ಉತ್ಸಾಹವನ್ನು ತರುವ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಎಲ್ಲಾ ಸ್ತ್ರೀಯ ಫೇಸಿಸ್ಟರ ಅನುಜ್ಞೆಗಳಿಗನುಸರಿಸಿಯೇ ಕೆಲಸಗಳನ್ನು ಮುಂದರಿಸಬೇಕೆಂಬ ನಿಯಮವಿದೆ.

ಇಂದು ಕಾಲದಲ್ಲಿ ಇಟೆಲಿ ಮಹಿಳೆಯರು ವಿದ್ಯಾವಂತೆಯರಾಗಿದ್ದರು. ದೇಶದಲ್ಲಿ ಅವರಿಗೆ ಉತ್ತಮ ಸ್ಥಾನ ಮಾನವಿದ್ದವು ವಿದ್ಯಾ ಸಂಸ್ಥೆಗಳಲ್ಲಿ ಸ್ತ್ರೀಯರೇ ಹೆಚ್ಚಿನವರಾಗಿದ್ದರು. ಆದರೆ ಇಟೆಲಿ ದೇಶದೊಳಗೆ ಫೇಸಿಸ್ಟ ಪಂಗಡ ಪ್ರವೇಶವಾಡೊಡನೆಯೇ ಸ್ತ್ರೀಯರ ಅಧಿಕಾರವೆಲ್ಲಾ ಸೆಂಸ್ಲೆ ಬಿತ್ತು. 10 ವರ್ಷಗಳಿಗೆ ಮಿಕ್ಕಿದ ಪಾಸಾದ ಗಂಡಸರಿಗೆ ಸ್ತ್ರೀಯು ಶಿಕ್ಷಣವನ್ನೀಯಲು ಅನುಮತಿಯಿಲ್ಲವೆಂಬ ಖಾನೂನು ಜಾರಿಗೆ ಬಂತು. ಅಧ್ಯಾಪಕರೆಲ್ಲರೂ ತಮ್ಮ ಕೆಲಸಗಳನ್ನು ಬಿಟ್ಟು ಕೂಡಬೇಕಾಯಿತು. ಸ್ತ್ರೀಯರ ವಿದ್ಯಾಲಯಗಳಲ್ಲಿಯೂ ಪ್ರಾಧ್ಯಮಿಕ ಶಾಲೆಗಳ ಉಪಾಧ್ಯಾಯಕಿಯರೆಲ್ಲರೂ ತಂತಾಯಿತ. ಈ ವರ್ತನೆಯ ವಿರುದ್ಧ ಖಂಡಿಸಿದರೂ ಫಲಕಾರಿಯಾಗಲಿಲ್ಲ.

ಹೆಚ್ಚಿನ ಹೆಂಗಸರು ಕಾರ್ಖಾನೆಗಳಲ್ಲಿಯೂ ಗಳ ಕಾರ್ಯಾಲಯಗಳಲ್ಲಿಯೂ ಕೆಲಸಗಳ ರೆ. ಅವರಿಗೆ ಗಂಡಸರಿಗೆ ದೊರೆಯುವ ಸ್ಥಾನಗಳೂ ಇಲ್ಲ. ಕೇವಲ ಕೂಲಿ ಡಿಯಬೇಕಾಗಿದೆ.

ಲಯದೊಳಗೆ ಸ್ತ್ರೀಯರು ಕಾಣ ಯರಿಗೆ ವಿದ್ಯೆಯೇ ಕಲಿಸಲ್ಪಡುವರಿಗೆ ತಾಯಂದಿರು ಅನುಸರಿಸಬೇ ಪೋಷಣೆಯ ಕ್ರಮಗಳ ಕುರಿ ಹೊರೆಯುತ್ತಿದೆ. ಇದಕ್ಕಾಗಿ ಕ.

ವೂ ವಿದ್ಯುವೆಯ ವಿಷಯದಲ್ಲಿ ನವಾದ ಹಕ್ಕು ಜಾಧ್ಯತೆಯು

ಸ್ತ್ರೀಯು ತನ್ನ ಪತಿಯನ್ನು ಅಗಲಿ ಹೋದುದೇ ಆದರೆ ಆಕೆಯನ್ನು ಪೊಲೀಸಿನವರು ಹಿಡಿದು ಪುನಃ ಗಂಡನ ವಶಕ್ಕೊಪ್ಪಿಸುವರು. ಆಕೆಯು ಮಾಡಿದ ಅಪರಾಧಕ್ಕಾಗಿ ಒಂದು ವರ್ಷದ ವರೆಗಿನ ಕಠಿಣ ಸಜೆಯನ್ನು ವಿಧಿಸುವರು. ಅಂತು ಸ್ತ್ರೀಯು ಪುರುಷನನ್ನು ಸದಾ ತಿಲ್ಲೈಸುತಿದ್ದು ಅ ನ ಅನುಜ್ಞೆಗಳಿಗನುಸರಿಸಿ ನಡೆದುಕೊಂಡು ಬಂದರೆ ಸರಿ ಆಗ ಆಕೆಗೆ ಕೊಂಚ ಸ್ವೇಮ ಉಂಟಾಗಬಹುದು.

ಈ ರೀತಿಯಲ್ಲಿ ಹೆಂಗಸರಿಗೆ ಅಧಿಕಾರ ಶೂನ್ಯವಾದರೂ ಇಟೆಲಿ ದೇಶದ ಸ್ತ್ರೀಯರು ಮಾದರಿ ತಾಯಂದಿರಾಗಬೇಕೆಂದು ಮುಸಲನಿಯವರ ಅಭಿಮತ. ಅವರು ಮಕ್ಕಳನ್ನು ಜಾಗರೂಕತೆಯಿಂದ ಸಾಕಬೇಕೆಂದು ಅಲ್ಲಿಯ ಸರ್ವಾಧಿಕಾರಿಗಳು ಆಜ್ಞಾಪಿಸಿರುತ್ತಾರೆ. ಮಕ್ಕಳ ಮರಣವು ಕಡಮೆಯಾಗಬೇಕು. ಜನ ಸಂಖ್ಯೆಯು ಅಧಿಕವಾಗಬೇಕು. ಆಗ ಇಟೆಲಿ ಜನಾಂಗವು ಇತರರನ್ನು ಸದೆ ಒಡಿದು ಒಂದು ದೊಡ್ಡ ಸಾಮ್ರಾಜ್ಯಾಧಿಪತ್ಯವನ್ನು ಸ್ಥಾಪಿಸಬಹುದು ಎಂದು ಮುಸಲನಿಯವರ ಹೇಳಿಕೆ. ಅದುದರಿಂದ ಯಾರು ಅಧಿಕ ಸಂಖ್ಯೆಯಲ್ಲಿ ಮಕ್ಕಳನ್ನು ಪ್ರಸವಿಸುವರೋ ಅವರಿಗೆ ಇಟೆಲಿಯಲ್ಲಿ ಅಷ್ಟು ಸನ್ಮಾನ ದೊರೆಯುತ್ತದೆ. ಜನಸಂಖ್ಯೆಯು ಹೆಚ್ಚಾಗಬೇಕೆಂದು ಅನೇಕ ಪ್ರಯತ್ನಗಳು ನಡೆಯುತ್ತಿವೆ. 14 ವರ್ಷಗಳಿಗೆ ಮೇಲ್ಪಟ್ಟ ಹುಡುಗಿಯರು ಮದುವೆಯಾಗಬೇಕೆಂದು ವಿಧಿಸಿರುತ್ತಾರೆ ಆಕೆಯು ಸಂತತಿನಿರೋಧದ ಕಾರಿತು ಯಾವ ರೀತಿಯಲ್ಲಿಯೂ ಪ್ರಯತ್ನಿಸಕೂಡದು. ಒಮ್ಮೆ ಓರ್ವ ರಮಣಿಯು 16 ಮಕ್ಕಳನ್ನು ಪ್ರಸವಿಸಿದಳಂತೆ. ಆಕೆಯೇ ಇಟೆಲಿಯ ವೀರ ರಮಣಿ ಎಂದು ಅಲ್ಲಿಯ ಸಕಲ ಪತ್ರಿಕೆಗಳೂ ಪ್ರಾರಂಭಿಸಿದುವು. ಆಕೆಯ ಮತ್ತು ಅವಳ ಮಕ್ಕಳ ಭಾವಚಿತ್ರಗಳು ಚಲನ ಚಿತ್ರಗಳಲ್ಲಿ ಪ್ರದರ್ಶಿಸಲ್ಪಟ್ಟವು. ಈ ಪ್ರಕಾರ ಸ್ತ್ರೀ ಸ್ವಾತಂತ್ರ್ಯಕ್ಕೆ ಮುಟ್ಟುಗೋಲು ಹಾಕಿರುವ ಇಟೆಲಿಯು ಅಬಿಸೀನಿಯೊವನ್ನು ನಾಗರೀಕ ರಾಷ್ಟ್ರವನ್ನಾಗಿ ಮಾಪಾಡಿಸಲು ಹೊರಟಿವೆ. ತನ್ನನ್ನೇ ಪ್ರಥಾಮದಲ್ಲಿ ಇತರರನ್ನು ಸುಧಾರಿಸುವದೂ ಈಗಿನ ನಾಗರೀಕತೆ.

ಪತ್ರವ್ಯವಹಾರ.

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಎಲ್ಲರ ಆಶೆಯು ನಿರಾಶೆಯಾಯಿತು.

ಅಯ್ಯಾ,

ಸೈಮನ್ ಕಮಿಷನಿನ ಮುಂದೆ ಸಾಕ್ಷಿ ಕೊಟ್ಟವರ ಆಶೆಯೂ, ಓಟಿಸೆನ್ಸಿಮಿಯರ್ ಸಮಿತಿಯವರೆದುರು ಮಂಡಿಸಿದ ಹೇಳಿಕೆಗಳೆಲ್ಲವೂ ನಿರಾಶೆಯಾಯಿತು. ಇನ್ನಷ್ಟಿದರೂ ವಿದ್ಯಾವಂತರೂ ಐಶ್ವರ್ಯವಂತರೂ ಮತ್ತು ಬುದ್ಧಿವಂತರೂ ಕಣ್ಣು ಬಿಟ್ಟು ನೋಡುವರೇ ?

ವಿಲ್ಲಂಟರುಗಳು ಮತ್ತು ಭೂಮಾಲೀಕರು ಮೊದಲು ಗೊಂಡು ವ್ಯವಸಾಯಗಾರರಲ್ಲರೂ ಈಗಿನ ರಾಜ್ಯಭಾರ ಕ್ರಮದ ಲೋಪದಿಂದಲೋ ? ಇಂಗ್ಲಿಷ್ ವಿದ್ಯಾಭ್ಯಾಸದ ನಾಗರೀಕತೆಯ ಪ್ರಚಾರದಿಂದಲೋ ? ಯಾ ಕಾಲ ವ್ಯತ್ಯಾಸದಿಂದಲೋ ? ಅಜ್ಜಂದಿಯರು ಕೂಡಿಟ್ಟಿದ್ದ ಚಿನ್ನ ಬೆಳ್ಳಿ ವಡವೆಗಳನ್ನೆಲ್ಲಾ ಕಳೆದುಕೊಂಡು ಸಾಲದ ಭಾಧೆಯಲ್ಲಿ ನರಳುತ್ತಾ ಹಣಕ್ಕಾಗಿ ಧಾವಿಸುತ್ತಾ, ಭೂಮಿ ಅಡವಾಗಿಟ್ಟ ಬ್ಯಾಂಕು ಕಾಫಿ ಪಡೆದ ಮೇಲೆ ಸಾಲಗಳನ್ನು ಕೊಡುವ ಸಂಸ್ಥೆಗಳನ್ನು ಮಾಡಿಕೊಂಡಿರುವುದರಿಂದಲ್ಲವೇ ದೇಶದಲ್ಲಿ ವಿಶೇಷವಾಗಿ ಆರ್ಥಿಕ ಹೀನ ಸ್ಥಿತಿಯು ಅಭಿವೃದ್ಧಿಗೊಂಡುಬಂತೆಂತಿಗಾಗಿರುವುದು.

ನಮ್ಮ ಆಶೆಗಳೆಲ್ಲಾ ನಿರಾಶೆಯಾಗಲು ದೇಶೀಯರಲ್ಲಿ ಒಗ್ಗಟ್ಟು ಇಲ್ಲದೆ ಇರುವುದೇ ಮುಖ್ಯ ಕಾರಣವೆಂಬುದನ್ನು ಇನ್ನಾದರೂ ಅರ್ಥಮಾಡಿಕೊಳ್ಳಲಾರೆ.

ಮುಂದು ಶತಮಾನಗಳ ಹಿಂದೆ ಪೃಥ್ವಿರಾಜನು ಪ್ರತಾಪನಿಗೆ ಬರೆದ ಪತ್ರದಲ್ಲಿ ಹೇಳಿರುವಂತೆ ಭಾರತವು ಭೂ [illegible] ಉದ್ಧಾರವಾಗಬೇಕಾದರೆ [illegible]

ಕಷ್ಟದಲ್ಲಿ ನಿಲುಕಿರುವವರು ಮೂತ್ರ ಬಾಯಿ ಒಡೆದುಕೊಂಡರೆ ಸಾಲದು. ಐಶ್ವರ್ಯವಂತರು ಮತ್ತು ವಿದ್ಯಾವಂತರು ಎಲ್ಲರೂ ಒಗ್ಗಟ್ಟಿನಲ್ಲಿ ಸೇರಿ ಈ ಮೊದಲು ಸಂಪತ್ತಿನಿಂದ ಬಾಳುತ್ತಿದ್ದವರ ಸ್ಥಿತಿಗತಿಗಳು ಈಗ ಹ್ಯಾಗೆ ಇವೆ. ದಾರಿದ್ರ್ಯದಲ್ಲಿ ನರಳುತ್ತಿದ್ದರೆ ಇದಕ್ಕೆ ಕಾರಣವೇನು ? ಮುಂದೆ ನಮ್ಮ ಮಕ್ಕಳು ಇಂಥಾ ಸ್ಥಿತಿಗಳಿಗೆ ಒಳಗಾಗುವರೆಂಬುದನ್ನು ಗ್ರಹಿಸಿಕೊಂಡು ಈಗ ಕಷ್ಟದಲ್ಲಿರುವವರನ್ನು ಉದ್ಧರಿಸಲು ತಕ್ಕ ಸಹಾಯ ಪಡೆಯಲು ಸರ್ಕಾರದವರೊಡನೆ ಹೋರಾಡದೆ ಅಂದಿಗೆ ಅದೇ ಸುಖ ಇಂದಿಗೆ ಇದೇ ಸುಖ. ತಾನು ತನ್ನ ಹೆಂಡರು ಮಕ್ಕಳು ಸುಖವಾಗಿದ್ದರೆ ಸಾಕು ಎಂದು ಯೋಚಿಸುವವರ ಬಾಳಲ್ಲಿ ಅವರು ಕಣ್ಣು ಮುಚ್ಚಿದ ಕೂಡಲೆ ವಿನಾಯವಾಗಿ ದಿವಾಳಿಯೆಂಬುದು ನನುಗಳ ಮುಂದೆ ಇರುವ ಅನುಭವಗಳಿಂದ ಖಂಡಿತವಾಗದಿರದು.

ಪ್ರತ್ಯೇಕವಾಗಿರುವ ಇಷ್ಟೊಂದು ಚಿಕ್ಕ ವಿಸ್ತಾರವನ್ನು ಉದ್ಧರಿಸಬೇಕೆಂಬುದಾಗಿ ಮನಸು ಸರ್ಕಾರಕ್ಕೆ ಇದ್ದಿದ್ದರೆ ವರ್ಷ ಬಂದಕ್ಕೆ ಕಡಮೆ ಪಕ್ಷ 10 ಲಕ್ಷ ರೂಪಾಯಿಗಳ ಮಂತಿಗೆಯನ್ನು 10 ವರ್ಷದ ವರಗಾದರೂ ಕೊಟ್ಟು ಸಹಕಾರ ಸಂಸ್ಥೆಗಳಿಗೆ ಎಲ್ಲಾ ವ್ಯವಸಾಹಾಯಗಾರರೂ ಸೇರಿ ಉತ್ಪತ್ತಿಯನ್ನು ಹೆಚ್ಚಿಸುವಂತೆಯೂ ಬಂದುತ್ಪತ್ತಿಗೆ ಒಳ್ಳೇ ಧಾರಣೆಸಿಕ್ಕುವಂತೆಯೂ ಮಾಡುತ್ತಿದ್ದರಲ್ಲವೆ ನಮಗೆ ಅನ್ಯರಿರುವ ಸಾವಿರಾರು ಸಂಘಗಳನ್ನೆಲ್ಲಾ ಸಂಘಗಳ ಮುಖಾಂತರ ತಂತಮ್ಮ ಲಾಭಕ್ಕೆ ಕೊಡುವಂಥಾ ವ್ಯವಸ್ಥೆಯನ್ನು ಮಾಡುತ್ತಿರಲಿಲ್ಲವೇ ? ಮುಂದಕ್ಕಾದರೂ ಒಹನೆ ಈ ರೀತಿ ಮಾಡುವ ಹೊಂತು ಮೋಕ್ಷವಿಲ್ಲ.

ಸರ್ವ ಸ್ಥಿತಿಗತಿಗಳು ಹೀಗಾಗಲು ಮುಖ್ಯವಾದ ನಾಲ್ಕು ಕಾರಣಗಳೆಂದು ಖಂಡಿತವಾಗುತ್ತೆ. (1) ತಲೆ ಭಾರದ ಅಡಳಿತ ಪದ್ಧತಿ. (2) ಇಂಗ್ಲಿಷ್ ವಿದ್ಯಾಭ್ಯಾಸವು ಹೆಚ್ಚುತ್ತಾ ಬಂದ ಹಾಗೆ ಅವರ ಅಡಂಬರದ ಪೋಷಾಕುಗಳನ್ನು ಅನುಸರಿಸುತ್ತಾ ನಿಷ್ಪಾಪಾನಾದಿಗಳನ್ನು ಸೇವಿಸುವ ಪದ್ಧತಿಯಾ ಸವು ವಿದ್ಯಾವಂತರಲ್ಲಿ ದಿನೇ ದಿನೇ ಹೆಚ್ಚುತ್ತಾ ಬಂದು ದೇಶವನ್ನೇ ಅಲಂಕರಿಸಿಕೊಂಡದು (3) ವ್ಯಾಪಾರಸ್ಥರಲ್ಲಿ ಸತ್ಯ ನ್ಯಾಯ ಮತ್ತು ಧರ್ಮದ ಆಚರಣೆಗಳು ಸಾಕಷ್ಟು ಇಲ್ಲದಿರುವುದು. (4) ಅಜ್ಞಾನವು ವಿದ್ಯಾಭ್ಯಾಸವು ಹೆಚ್ಚುತ್ತಾ ಬಂದ ಹಾಗೆ ಜನರಲ್ಲಿ ಪರಸ್ಪರ ವಿಶ್ವಾಸಗಳು ಇಲ್ಲದಂತಾಗಿ ಹಣಕ್ಕಾಗಿ ರಾಕ್ಷಸರಂತೆ ಸುಳ್ಳು, ಕಳ್ಳತನ, ಮೋಸಗಾರಿಕೆ ಹೆಚ್ಚಿ ಕೋರ್ಟು ಕಚ್ಚೇರಿಗಳಲ್ಲಿ ವ್ಯವಹಾರಗಳು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಇವೆ.

ನಮ್ಮ ಸ್ಥಿತಿಗತಿಗಳು ಉತ್ತಮವಾಗಬೇಕಾದರೆ ಪ್ರಜಾ ಜವಾಬ್ದಾರಿ ಸರ್ಕಾರಿ ಪದ್ಧತಿಯನ್ನು ಜಾರಿಯಲ್ಲಿ ಇಟ್ಟುಕೊಂಡು ಪ್ರಜೆಗಳ ಹಿತವಾ ದೃಷ್ಟಿಯಿಂದ ತಾಯಿ ಥರ ಕೆಲಸ ಕಾರ್ಯಗಳನ್ನು ಸರ್ಕಾರವು ಕೈಕೊಳ್ಳುವಂತಾಗಬೇಕು. ವಿದ್ಯಾವಂತರೆಲ್ಲ ಸತ್ಯ, ನ್ಯಾಯ ಮತ್ತು ಧರ್ಮ ಮಾರ್ಗಗಳನ್ನನುಸರಿಸಿ ದೇಶದ ಹಿತಕ್ಕಾಗಿ ಜನ ಸೇವೆಯನ್ನು ಮಾಡಲು ಮುಂದಕ್ಕೆ ಬರಬೇಕು. ಈ ಎಲ್ಲಾ ವಿಷಯಗಳು ಒಡನೆ ಆಗದೆ ಸಾಲವನ್ನು ಕೊಡುವ ಸಂಸ್ಥೆಗಳು ಎಷ್ಟು ಹೆಚ್ಚುತ್ತವೋ ಅಷ್ಟು ಹೆಚ್ಚಾಗಿ ಜನರಿಗೆ ಹಣವು ಅಭಿವೃದ್ಧಿಯು ಉಂಟಾಗುತ್ತದೆಂಬುದು ಖಂಡಿತವೆಂಬುದು ಇಂದು ನಮಗಿರುವ ಮುಂದೆ ಇರುವ ಉದಾಹರಣೆಗಳಿಂದ ಪಿಚಿತವಾಗಿದೆ. ಕಳೆದ ವರ್ಷಗಳಿಂದ ಶಹರುಗಳಲ್ಲಿ ಹೆಚ್ಚುತ್ತಿರುವ ಹೊಟೆಲುಗಳ ಸಂಖ್ಯೆಯನ್ನು ಯೋಚಿಸಿಕೊಂಡರೆ ಹೊಟೆಲುಗಳು ಹೆಚ್ಚುತ್ತಾ ಒಂದು ಹಾಗೆ ಜನರಿಗೆ ಹಣವೂ ಬಾಯಾರಿಕೆಯೂ ಹೆಚ್ಚುತ್ತಾ ಇದೆ ಎಂಬುವುದು ವೇದ್ಯವಾಗುತ್ತದೆ. ಅದರಂತೆ ಉತ್ಪತ್ತಿಯು ಹೆಚ್ಚುತ್ತಾ ಒಂದು ಹಾಗೆ ಕಲಿ ಭಾರ ಸರ್ಕಾರ ಪದ್ಧತಿಯೂ ದಿನೇ ಅಭಿವೃದ್ಧಿಗೊಳ್ಳುತ್ತಾ ಒಂದು ಸರ್ಕಾರವು ಪ್ರಜೆಗಳೊಂದಿಗೆ ನ್ಯಾಯವಾದ ಸಮಕಾಲತ್ವವನ್ನು ಅನುಸರಿಸಿ ನಡೆಯುವುದರ ಬದಲು ಇಲ್ಲದ ಸಲ್ಲದ ಖಾನೂನು, ಖಾಯಿದೆಗಳಿಂದ ಜನ ಸಾಮಾನ್ಯರನ್ನು ನಿರ್ಬಂಧಕ್ಕೆ ಒಳಪಡಿಸುತ್ತಾ ಇರುವುದರಿಂದಲ್ಲವೇ ದೇಶದಲ್ಲಿ ವಿಶೇಷವಾಗಿ ಆರ್ಥಿಕ ಹೀನ ಸ್ಥಿತಿಯು ಅಭಿವೃದ್ಧಿಗೊಂಡುಬಂತೆಂತಿಗಾಗಿರುವುದು.

ನಮ್ಮ ಆಶೆಗಳೆಲ್ಲಾ ನಿರಾಶೆಯಾಗಲು ದೇಶೀಯರಲ್ಲಿ ಒಗ್ಗಟ್ಟು ಇಲ್ಲದೆ ಇರುವುದೇ ಮುಖ್ಯ ಕಾರಣವೆಂಬುದನ್ನು ಇನ್ನಾದರೂ ಅರ್ಥಮಾಡಿಕೊಳ್ಳಲಾರೆ.

ಮುಂದು ಶತಮಾನಗಳ ಹಿಂದೆ ಪೃಥ್ವಿರಾಜನು ಪ್ರತಾಪನಿಗೆ ಬರೆದ ಪತ್ರದಲ್ಲಿ ಹೇಳಿರುವಂತೆ ಭಾರತವು ಭೂ [illegible] ಉದ್ಧಾರವಾಗಬೇಕಾದರೆ [illegible]